PRGI : KNKAN/26/A0629
ವಿಜಯನಗರ-ಬಳ್ಳಾರಿ-ಕೊಪ್ಪಳ-ರಾಯಚೂರು-ಗದಗ-ಯಾದಗಿರಿ-ದಾವಣಗೆರೆ-ಹಾವೇರಿ-ಕಲಬುರ್ಗಿ- ಜಿಲ್ಲೆಗಳಲ್ಲಿ ಪ್ರಸಾರಿತ
NO.PMG/KA/NK/BLY/04/2026-2028

# ಹೊಸಪೇಟೆ ಧ್ವನಿ

HOSAPETE DHWANI
Kannada Daily morning news paper
ಸ್ವಾಸ್ಥ್ಯ ಸಮಾಜಕ್ಕಾಗಿ ನಮ್ಮ ಧ್ವನಿ
ಕನ್ನಡ ದಿನ ಪತ್ರಿಕೆ
ಸಂಪಾದಕರು
ಕೆ.ಪ್ರಕಾಶ ಕಾಕುಬಾಳು
Editor : K. prakash Kakubalu ಮೊ. 9342568684 VIJAYANAGARA

ಸ್ಟ್ರಿಂಗ್ ಆಪರೇಷನ್ ವಿಡಿಯೋಗೂ ನನಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಇದನ್ನು ಬಳಸಿಕೊಂಡು ಕೆಲವು ಕಿಡಿಗೇಡಿಗಳು ನನ್ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ.

–ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ



ಸಂಪುಟ : 01 ಸಂಚಿಕೆ : 189 ಬುಧವಾರ ದಿನಾಂಕ : 14-10-2026 ಪುಟ-4 ಬೆಲೆ : 2 ರೂ. E mail: hosapetedhwani32026@gmail.com
Volume 01 Issue : 189 Wednesday Date: 14-10-2026 Page-4 Rs : 2 ರೂ. E mail: hosapetedhwani32026@gmail.com

# ಜನ ಜಾನುವಾರುಗಳಿಗೂ ಕುಡಿಯುವ ನೀರು, ಮೇವು ಕೊರತೆಯಾಗದಿರಲಿ

## ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನಿಕೇರಿ ಸೂಚನೆ

**ವಿಜಯನಗರ (ಹೊಸಪೇಟೆ) :** ಜಿಲ್ಲೆಯಲ್ಲಿ ಮುಂದುವರಿದಿರುವ ಭೀಕರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ವಿಚಾರಗಳಲ್ಲಿ ಯಾವುದೇ ಲೋಪವಾಗದಂತೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನಿಕೇರಿ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರ ನಿರ್ವಹಣೆ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂಗಾರು ಮಳೆ ಕೈಕೊಟ್ಟ ಕಾರಣ ಜಿಲ್ಲೆಯಲ್ಲಿ ಭೀಕರ ಬರಗಾಲ ಆವರಿಸಿದೆ. ಈ ನಿಟ್ಟಿನಲ್ಲಿ ಕುಡಿಯುವ ನೀರನ್ನು ಮಿತವಾಗಿ ಬಳಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ನೀರು ವ್ಯರ್ಥವಾಗಿ ಹರಿದು ಪೋಲಾಗುವುದನ್ನು ತಡೆಯಬೇಕು. ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ತೀವ್ರ ನೀರಿನ ಕೊರತೆ ಉಂಟಾದಲ್ಲಿ ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಪೂರೈಕೆಗೆ ಕ್ರಮ ವಹಿಸಬೇಕು. ಕೊಳವೆ ಬಾವಿ ಲಭ್ಯವಾಗದಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಬೇಕು ಎಂದು ನಿರ್ದೇಶಿಸಿದರು.

**ಜಾನುವಾರುಗಳಿಗೆ ಮೇವು, ನೀರಿನ ವ್ಯವಸ್ಥೆ**

ಬರ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ನಾಲ್ಕು ವಾರಗಳಿಗೂ ಕಡಿಮೆ ಮೇವು ಲಭ್ಯವಿದ್ದಲ್ಲಿ ಮೇವು ಬ್ಯಾಂಕ್ ಸ್ಥಾಪಿಸಲು ಹಾಗೂ ಎರಡು ವಾರಗಳಿಗಿಂತ ಕಡಿಮೆ ಅವಧಿಗೆ ಮೇವು ಲಭ್ಯವಿದ್ದಲ್ಲಿ ಗೋಶಾಲೆ ಆರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಜಾನುವಾರುಗಳ ಸಂ–ಖ್ಯೆಗೆ ಅನುಗುಣವಾಗಿ ಮೇವು ಬೀಜ ವಿತರಿಸಬೇಕು. ಗ್ರಾಮಗಳಲ್ಲಿರುವ ನೀರಿನ ತೊಟ್ಟಿಗಳನ್ನು ಸಮರ್ಪಕವಾಗಿ ನಿರ್ವಹಿಸುವುದರ ಜತೆಗೆ ಅಗತ್ಯವಿರುವ ಸಮರ್ಪಕವಾಗಿ ನೀರು ಪೂರೈಕೆ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ 19 ಗ್ರಾಮ ಪಂಚಾಯಿತಿಗಳನ್ನು ಸಮಸ್ಯಾತ್ಮಕ ಗ್ರಾಮ ಪಂಚಾಯಿತಿಗಳೆಂದು ಗುರುತಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಬರ ಮುಂದುವರಿದರೆ ನೀರಿನ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆಯಿದ್ದು, ಅದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

**ಆರ್‌ಒ ಘಟಕಗಳ ದುರಸ್ತಿಗೆ ಸೂಚನೆ :**



ಜಿಲ್ಲೆಯಲ್ಲಿ ದುರಸ್ತಿಗೆ ಬಾಕಿ ಇರುವ ಆರ್‌ಒ ಘಟಕಗಳನ್ನು ಶೀಘ್ರ ಸರಿಪಡಿಸಬೇಕು. ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದ ಏಜೆನ್ಸಿಗಳಿಗೆ ನೋಟಿಸ್ ನೀಡಲಾಗಿದ್ದು, ಬಾಕಿ ದುರಸ್ತಿ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಸಾರ್ವಜನಿಕರಿಗೆ ತೊಂದ–ರೆಯಾಗದಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗರಿಮಾ ಪನ್ವಾರ್ ತಿಳಿಸಿದರು.

**ಮೇವು ವಿತರಣೆ ಶೇ.100ರಷ್ಟು ಅನುಷ್ಠಾನವಾಗಲಿ**

ಕೆಎಂಎಫ್ ಯೋಜನೆಯಡಿ 370 ಸಂಘಗಳು ಅಥವಾ ಹಾಲು ಉತ್ಪಾದಕರಿಗೆ ಮೇವು ಬೀಜ ವಿತರಿಸಿರುವುದಾಗಿ ದಾಖಲಾಗಿದೆ. ಈ ಯೋಜನೆ ಕೇವಲ ದಾಖಲೆಗಳಿಗೆ ಸೀಮಿತವಾಗದೆ ಶೇ.100ರಷ್ಟು ಅನುಷ್ಠಾನಗೊಳ್ಳಬೇಕು. ವಿತರಣೆಯಲ್ಲಿ ಲೋಪ ಕಂಡುಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

**ರೈತರ ಸಾಲ ವಸೂಲಾತಿಗೆ ಕಡಿವಾಣ :**

ಬರಗಾಲದ ಹಿನ್ನೆಲೆಯಲ್ಲಿ ರೈತರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ನೋಟಿಸ್ ನೀಡಿ ಕಿರುಕುಳ ನೀಡುವುದು ಅಥವಾ ಬಲವಂತದ ವಸೂಲಾತಿ ನಡೆಸುವುದನ್ನು ಸಹಿಸಲಾಗುವುದಿಲ್ಲ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಅಥವಾ ವ್ಯಕ್ತಿಗಳ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳಲಿದೆ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದರು. ರೈತರು ಸಾಲ ಸೌಲಭ್ಯ ಕೋರಿ ಬಂದಾಗ ಬ್ಯಾಂಕ್ ಅಧಿಕಾರಿಗಳು ಅಗತ್ಯ ನೆರವು ನೀಡಬೇಕು. ಸಾಲ ಮರುಹೊಂದಾಣಿಕೆ ಪ್ರಕ್ರಿಯೆಗೆ ಆದ್ಯತೆ ನೀಡಬೇಕು. ರೈತರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

**ಗುಳೆ ತಪ್ಪಿಸಲು ಉದ್ಯೋಗಾವಕಾಶ ಕಲ್ಪಿಸಿ :**

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ರೈತರು ಹಾಗೂ ಕೂಲಿಕಾರ್ಮಿಕರು ಕೆಲಸಕ್ಕಾಗಿ ಗುಳೆ ಹೋಗುವುದನ್ನು ತಡೆಯಬೇಕು. ವಿಬಿಜಿ ರಾಮ್ ಜಿ ಯೋಜನೆಯಡಿ ಅರ್ಹರಿಗೆ ಕೆಲಸ ಒದಗಿಸಿ, ಕಾರ್ಮಿಕರಿಗೆ ವೇತನ ಪಾವತಿಯಲ್ಲಿ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.

ಕುಡಿಯುವ ನೀರು ಮತ್ತು ವೇತನಕ್ಕೆ ಸಂಬಂಧಿಸಿದ ದೂರುಗಳಿಗೆ ಮೊದಲ ಆದ್ಯತೆ ನೀಡಬೇಕು. ದೂರು ಸ್ವೀಕರಿಸಿದ 24 ಗಂಟೆಗಳೊಳಗೆ ಪರಿಹಾರ ಕಲ್ಪಿಸುವ ವ್ಯವಸ್ಥೆ ರೂಪಿಸಬೇಕು. ಕಾರ್ಮಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದರ ಜತೆಗೆ ಟ್ರ್ಯಾಕ್ಟರ್‌ಗಳಿಗೆ ಜಿಪಿಎಸ್ ಅಳವಡಿಕೆ ಸೇರಿದಂತೆ ಅಗತ್ಯ ಮೇಲ್ವಿಚಾರಣೆ ಕೈಗೊಳ್ಳಬೇಕು ಎಂದರು.

ಪ್ರತಿ 15 ದಿನಕ್ಕೊಮ್ಮೆ ಟಾಸ್ಕ್‌ಫೋರ್ಸ್ ಸಭೆ : ಬರ ನಿರ್ವಹಣೆಯ ಪ್ರಗತಿಯನ್ನು ಪರಿಶೀಲಿಸಲು ತಾಲೂಕು ಮಟ್ಟದಲ್ಲಿ ನಿಗದಿತ ದಿನಗಳಂದು ಸಭೆಗಳನ್ನು ನಡೆಸಿ, ಅಂದೇ ಸಭೆಯ ನಡೆಸಿ ವರದಿ ಸಲ್ಲಿಸಬೇಕು. ಪರಿಹಾರ ಕಾರ್ಯಗಳಲ್ಲಿ ವಿಳಂಬವಾಗದಂತೆ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ಪರಿಹಾರ ಒದಗಿಸಬೇಕು. ಜನರಿಗೆ ಮಾತ್ರವಲ್ಲದೆ ಜಾನುವಾರುಗಳಿಗೂ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಉಪವಿಭಾಗಾಧಿಕಾರಿ ವಿವೇಕಾನಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ರೈತರಿಗೆ ಮಣ್ಣಿನ ಜೀವಂತಿಕೆ ಅತ್ಯವಶ್ಯ

## ಕೃಷಿಕ ಘಂಟಿ ರಾಘವೇಂದ್ರ ಶೆಟ್ಟಿ ಅಭಿಮತ

**ಹೊಸಪೇಟೆ ಧ್ವನಿ ನ್ಯೂಸ್ :**

**ಕೂಡ್ಲಿಗಿ :** ಬಹುತೇಕ ರೈತರು ಬೆಳೆ ಬೆಳೆಸಲು ಮಾತ್ರ ಗಮನ ಕೊಡುತ್ತಾರೆ. ಮಣ್ಣಿನ ಜೀವಂತಿಕೆ ಬಗ್ಗೆ ಕಿಂಚಿತ್ತೂ ಚಿಂತಿಸುವುದಿಲ್ಲ. ಆದರೆ ರೈತರ ಅಸಲಿ ಯಶಸ್ಸು ಮಣ್ಣನ್ನು ಉಳಿಸಿ ಬೆಳೆಸುವುದರಲ್ಲಿದೆ ಎಂದು ಸಾವಯವ ಕೃಷಿಕ ಘಂಟಿ ರಾಘವೇಂದ್ರ ಶೆಟ್ಟಿ ಅಭಿಪ್ರಾಯಪಟ್ಟರು.

ಪಟ್ಟಣದ ಹೊರವಲಯದ ತಮ್ಮ ತೋಟದಲ್ಲಿ ಆಯೋಜಿಸಿದ್ದ 'ಹಸಿರಿನೊಂದಿಗೆ ಮಾತುಕತೆ'ಯ 20ನೇ ಕಾರ್ಯಕ್ರಮದ ಆತಿಥ್ಯ ವಹಿಸಿ ಅವರು ಮಾತನಾಡಿದರು.

ಕೃಷಿಯಲ್ಲಿ ಮಣ್ಣು ಮೂಲಧಾತು. ಅದನ್ನು ನಾವು ನಿರ್ಜೀವಗೊಳಿಸಿದರೆ ಕೃಷಿಯಲ್ಲಿ ಅರ್ಧ ಸೋತಂತೆ. ಹೀಗಾಗಿ ಮೊದಲು ಮಣ್ಣಿನ ಸತ್ವ ಸಂರಕ್ಷಿಸಿ, ಹೆಚ್ಚಿಸಬೇಕು. ಅದಕ್ಕಾಗಿ ಸಾವಯವ, ನೈಸರ್ಗಿಕ, ಸಹಜ ಕೃಷಿ ಹಾದಿ ತುಳಿಯಬೇಕು. ನಾನು ದಶಕಗಳ ಕಾಲ ಇದೇ ಮಾದರಿಯ ಕೃಷಿ ಮಾಡಿದ್ದು, ಈಗಲೂ ಮಾಡುತ್ತಿರುವೆ. ಕೃಷಿ ತ್ಯಾಜ್ಯವನ್ನು ಮುಚ್ಚಿಗೆ ಆಗಿ, ಮಣ್ಣಿಗೆ ಗೊಬ್ಬರವಾಗಿ ಪರಿವರ್ತಿಸಿರುವೆ. ಗೋ ಸಹಿತ, ರಹಿತ ಸಾವಯವ ಕೃಷಿ ವಿಧಾನವನ್ನು



ಅನುಸರಿಸಿ ಅದರಲ್ಲೂ ಸಫಲತೆ ಕಾಣುತ್ತಿರುವೆ. ಮಣ್ಣು ಆರೋಗ್ಯವಾಗಿದ್ದರೆ ಬೆಳೆಗಳೂ ಆರೋಗ್ಯವಾಗಿರುತ್ತವೆ. ಪಂಚ ತರಂಗಿಣಿ ಪದ್ಧತಿಯ ಕೃಷಿಯನ್ನು ಅಳವಡಿಸಿಕೊಂಡಿರುವೆ. ಜಮೀನಿನಲ್ಲಿ ಬೆಳೆ ವೈವಿಧ್ಯತೆ ಇದೆ. ಸುಸ್ಥಿರ ಕೃಷಿಯಿಂದ ಸಮೃದ್ಧವಾಗಿದೆ ಈ ಜಮೀನು ಮತ್ತು ನನ್ನ ಬದುಕು ಎಂದರು.

ಕೃಷಿ ಕಾರ್ಯಕರ್ತ ಮಲ್ಲಿಕಾರ್ಜುನ ಹೊಸಪಾಳ್ಯ ಮಾತನಾಡಿ, ಇದೊಂದು ಅನೌಪಚಾರಿಕ ಮಾತುಕತೆ. ಕೃಷಿಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು, ಕೃಷಿಯ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಮುಕ್ತವಾಗಿದೆ. ಕೃಷಿಕರೇ ಪರಸ್ಪರ ಸಲಹೆ, ಸಹಕಾರ ಹಾಗೂ ವಿಚಾರ ವಿನಿಮಯದಿಂದ ಸುಸ್ಥಿರ ಅಭಿವೃದ್ಧಿ ಹೊಂದಬೇಕು ಎಂಬುದು ಬಳಗದ ಉದ್ದೇಶ ಎಂದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದ ಮುಖ್ಯಸ್ಥರಾದ ಡಾ. ಪಿ.ಆರ್. ಬದರಿ ಪ್ರಸಾದ್ ಮಾತನಾಡಿ, ಕೃಷಿಯಲ್ಲಿ ಜನರಿಗೆ ಸಾಕಷ್ಟು ಒಲವು ಇದೆ. ಆದರೆ ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ. ಅದಕ್ಕಾಗಿ ನಮ್ಮ ಕೇಂದ್ರದಲ್ಲಿ 'ಒಡಲಾಳ' ಎಂಬ ವಿನೂತನ ಕಾರ್ಯಕ್ರಮವನ್ನು ರೈತರಿಗಾಗಿಯೇ ಪ್ರತಿ ತಿಂಗಳು ಆಯೋಜಿಸಿ ಮಾರ್ಗದರ್ಶನ ನೀಡಲಿರುವುದಾಗಿ ತಿಳಿಸಿದರು.

ಬೆಳವಲದ ರಾಯಭಾರಿ ಹೆಚ್.ವಿ. ಸಜ್ಜನ್ ಮಾತನಾಡಿ, ಈ ಜಮೀನು ಸ್ಯಾಂಪಲ್ ಪಟ್ಟಿ ತರಹ ಇದ್ದು, ಇಲ್ಲಿನ ಪ್ರಯೋಗಗಳು ಮತ್ತು ಯಶಸ್ಸು ಕೃಷಿಕರಿಗೆ ಸಿದ್ಧ ಮಾದರಿ ಆಗಿದೆ. ಇವರ ಹಾದಿಯಲ್ಲಿ ಸಾಗಿದರೆ ಕೃಷಿಯಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ದಾವಣಗೆರೆಯ ಜಬೀವುಲ್ಲಾ ಬಿದಿರು ಬೆಳೆ ಮತ್ತು ಅದರ ಮೌಲ್ಯವರ್ಧನೆ ಕುರಿತು, ಶಶಿಧರ ಗುರೂಜಿ ಕೃಷಿ ಕ್ಷೇತ್ರದ ಸವಾಲಿನ ಬಗ್ಗೆ ಮಾತನಾಡಿದರು.

ಬಾಳಸಾಹೇಬ ಪಾಟೀಲ್, ಹುಲಿಕೇರಿ ಶರಣಪ್ಪ, ಪೂಜಾರಹಳ್ಳಿ ತಿಪ್ಪೇಸ್ವಾಮಿ, ರೂಬಿ ಮಲ್ಲೇಶ್, ದೂಪದಹಳ್ಳಿ ಮಲ್ಲಿಕಾರ್ಜುನ, ಗಜಾಪುರ ವಿಜಯ್, ಅಮ್ಮನಕೇರಿ ನವೀನ್, ಬಸರಕೋಡು ಒಪ್ಪೊತ್ತೇಶ್ವರ, ಆನೇಕಲ್ಲು ನಾಗರಾಜ್, ನಾಗೇಂದ್ರ ಪ್ರಸಾದ್, ನಿವೃತ್ತ ಅಡಿಷನಲ್ ಎಸ್.ಪಿ ಮಂಜುನಾಥ್ ಸೇರಿದಂತೆ ತಮ್ಮ ಕೃಷಿ ಅನುಭವಗಳನ್ನು ಹಂಚಿಕೊಂಡರು.

ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ, ಬಿಜಾಪುರ, ದಾವಣಗೆರೆ ಜಿಲ್ಲೆಗಳಿಂದ ನೂರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಸಚಿನ್ ಪಾತ್ರೆ, ಯು.ಎಸ್. ಪ್ರಸನ್ನ, ಬಸಯ್ಯಸ್ವಾಮಿ, ಸಿ.ಎಸ್.ಪುರ ನಾಗೇಶ್ವರ, ಸ್ವರೂಪ್ ಕೊಟ್ಟೂರು, ಬಂಡ್ರಿ ಓಬಳೇಶ, ಬಸವರಾಜ್ ಕನಕಗಿರಿ, ಮಾರ್ಗದಪ್ಪ, ಹರಿಶ್ ಕೋರಿ, ರಾಮ ಪ್ರಸಾದ್, ಕೃಷ್ಣ ಪ್ರಸಾದ್, ದೇವರಾಜ್ ಗೋಮಾಳಿ, ಶ್ರೀ ಪ್ರಕಾಶ್, ಬಿ.ಎಂ. ಶ್ರೀನಾಥ್, ಆಶಾ ಎಸ್, ಸೋಮೇಶ್ ಉಪ್ಪಾರ್, ಭರತ್ ಕುಮಾರ್, ಹೆಚ್.ಎಸ್. ಕರ್ಣಂ ಮುಂತಾದವರು ಇದ್ದರು.

## ಹೊಸಪೇಟೆ: 54 ಫಲಾನುಭವಿಗಳಿಗೆ ನಿವೇಶನ ಮಂಜೂರು: ಅನಂತಶಯನಗುಡಿ ಫ್ಲೈಓವರ್ ಕಾಮಗಾರಿಗೆ ಚಾಲನೆ



**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ :** ನಗರದ ಬಹುದಿನಗಳ ಬೇಡಿಕೆಯಾದ ಅನಂತಶಯನಗುಡಿ ರೈಲ್ವೆ ಫ್ಲೈಓವರ್ ಕಾಮಗಾರಿ ಸ್ಥಳಕ್ಕೆ ಶಾಸಕ ಹೆಚ್.ಆರ್.ಗವಿಯಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಸ್ಥಳೀಯ ಸಮಸ್ಯೆಯಿಂದ ನೆನೆಗುದಿಗೆ ಬಿದ್ದಿದ್ದ ಕಾಮಗಾರಿಗೆ ಅಡೆತಡೆಯಾಗಿದ್ದ 54 ಕುಟುಂಬಗಳಿಗೆ ವಸತಿ ನಿವೇಶನ ಮಂಜೂರು ಮಾಡಿಸುವ ಮೂಲಕ ಶಾಸಕರು ಕಾಮಗಾರಿ ಮುಂದುವರೆಯಲು ಕ್ರಮ ಕೈಗೊಂಡಿದ್ದಾರೆ. ಕಾಮಗಾರಿಗೆ ಎದುರಾಗಿದ್ದ ಸಮಸ್ಯೆ ಬಗೆಹರಿದಿದ್ದಕ್ಕೆ ಸ್ಥಳೀಯರು ಸಂತಸ ವ್ಯಕ್ತಪಡಿಸಿ, ಶಾಸಕರಿಗೆ ಧನ್ಯವಾದ ತಿಳಿಸಿದರು.

## ಕೊಪ್ಪಳ : ಕರ್ನಾಟಕ ವ್ಯಾಪ್ತಿಯ RBHLC ನಾಲೆಗಳಿಗೆ ನೀರು ಸ್ಥಗಿತ – KNNL ಆದೇಶ



**ಮುನಿರಾಬಾದ್(ಕೊಪ್ಪಳ) :** ತುಂಗಭದ್ರಾ ಜಲಾಶಯದ ಕರ್ನಾಟಕ ರಾಜ್ಯ ವ್ಯಾಪ್ತಿಯ ಬಲದಂಡೆ ಮೇಲ್ಮಟ್ಟದ ಕಾಲುವೆ (RBHLC) ಉಪನಾಲೆಗಳಿಗೆ ನೀರು ಬಿಡುವುದನ್ನು ನಿಲ್ಲಿಸುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತ ಆದೇಶ ಹೊರಡಿಸಿದೆ.

ಕೆಎನ್‌ಎನ್‌ಎಲ್ ತುಂಗಭದ್ರಾ ಪ್ರಾಜೆಕ್ಟ್ ಸರ್ಕಲ್‌ನ ಅಧೀಕ್ಷಕ ಅಭಿಯಂತರರು, ತುಂಗಭದ್ರಾ ಮಂಡಳಿಯ ನೀರಾವರಿ ವಿಭಾಗದ ಅಧೀಕ್ಷಕ ಅಭಿಯಂತರರಿಗೆ ಪತ್ರ ಬರೆದಿದ್ದು, ಐಸಿಸಿ ಅಧ್ಯಕ್ಷರ ನಿರ್ದೇಶನದಂತೆ ಅ.13, 2026 ರಿಂದ ಕರ್ನಾಟಕದ ಖಃಊಐಅ ಉಪನಾಲೆಗಳಿಗೆ ನೀರು ಬಿಡುವುದನ್ನು ಸ್ಥಗಿತಗೊಳಿಸಬೇಕು ಎಂದು ತಿಳಿಸಿದ್ದಾರೆ. ಮುಂದಿನ ನೀರು ಬಿಡುಗಡೆಗೆ ಇಂಡೆಂಟ್ ಸಲ್ಲಿಸಲಾಗುವುದು ಎಂದು ಪತ್ರದಲ್ಲಿ

# ಶಿಕ್ಷಕರ ಕ್ಷೇತ್ರದ ಚುನಾವಣೆ: ಶರಣಪ್ಪ ಮಟ್ಟೂರು ಪರ ಕಾಂಗ್ರೆಸ್ ನಾಯಕರಿಂದ ಪ್ರಚಾರ

**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ–2026ರ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರ ಪರವಾಗಿ ಬಳ್ಳಾರಿ ನಗರದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಮಂಗಳವಾರ ಕಾಂಗ್ರೆಸ್ ಮುಖಂಡರು ಪ್ರಚಾರ ನಡೆಸಿ ಮತಯಾಚಿಸಿದರು.

ನಗರದ ವಿ.ವಿ. ಸಂಘದ ತೊಗರಿ ವೀರಮಲ್ಲಪ್ಪ ಮೆಮೋರಿಯಲ್ ಕಾಲೇಜ್ ಆಫ್ ಫಾರ್ಮಸಿ, ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ಕಾಲೇಜು, ಅಲ್ಲಂ ಕರಿಬಸಪ್ಪ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಎಕೆಐಎಂ), ವೀರಶೈವ ಡಿಗ್ರಿ ಕಾಲೇಜು, ಶ್ರೀ ಮೇಧಾ ಕಾಲೇಜು




ಹಾಗೂ ಬಿ.ಬಿ.ಸಿ. ಕಾಲೇಜುಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಪ್ರಚಾರ ಕಾರ್ಯ ನಡೆಸಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಚುನಾವಣೆಯ ಬಳ್ಳಾರಿ ನಗರ ವೀಕ್ಷಕರಾದ ಜೆ.ಎಸ್. ಆಂಜನೇಯುಲು, ಬಳ್ಳಾರಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಡಿಸಿಸಿ ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣುವರ್ಧನ, ಬಳ್ಳಾರಿ ಗ್ರಾಮೀಣ ಚುನಾವಣಾ ವೀಕ್ಷಕ ಮಾನಯ್ಯ, ಮಾಜಿ ಸಿಂಡಿಕೇಟ್ ಸದಸ್ಯ ಸತೀಶ್ ಕಾಂಡ್ರಾ, ಡಿಸಿಸಿ ಕಾರ್ಯದರ್ಶಿ ಶೋಭಾ ಕಲಿಂಗ, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಶಿಕ್ಷಕರ ವಿಭಾಗದ ಅಧ್ಯಕ್ಷ ಅಖಿಲ್ ಅಹ್ಮದ್, ಸೇವಾದಳ ಅಧ್ಯಕ್ಷ ಅತಾವುಲ್ಲಾ, ಮಲ್ಲಿಶ್ವರಿ, ಜೆ. ಅಖಿಲ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ವಿಭಾಗೀಯ ಮಟ್ಟದ ಚಿತ್ರಕಲಾ ಸ್ಪರ್ಧೆ:

# ಯಮನೂರಪ್ಪಗೆ ತೃತೀಯ ಬಹುಮಾನ

**ಹೊಸಪೇಟೆ ಧ್ವನಿ ನ್ಯೂಸ್ :**

**ವಿಜಯನಗರ (ಹೊಸಪೇಟೆ) :** ರಾಯಚೂರು ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಕಲ್ಯಾಣ ಕರ್ನಾಟಕ ವಿಭಾಗೀಯ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೀರಿದ್ದರೆ ನಾಳೆ ಎಂಬ ಘೋಷವಾಕ್ಯದಡಿಯಲ್ಲಿ ನಮ್ಮ ಭೂಮಿ ನಮ್ಮ ನೀರು ನಮ್ಮ ಶಕ್ತಿ ಎಂಬ ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಹೊಸಪೇಟೆಯ ಸರ್ಕಾರಿ ಪ್ರೌಢಶಾಲೆ ಅನಂತಶಯನಗುಡಿಯ ವಿದ್ಯಾರ್ಥಿ ಯಮನೂರಪ್ಪ ಅವರು ತೃತೀಯ



ಬಹುಮಾನದೊಂದಿಗೆ ರೂ.10,000 ನಗದು ಬಹುಮಾನ ಪಡೆದುಕೊಂಡಿ–ದ್ದಾರೆ. ಅಲ್ಲದೆ, ಹೊಸಪೇಟೆಯ ಕೆ.ಸಿ.ಎ. (KCA) ಶಾಲೆಯ ವಿದ್ಯಾರ್ಥಿ ಗೌತಮ್ ಕೆ. ಚಿತ್ರಗಾರ ಹಾಗೂ ಸರ್ಕಾರಿ ಪ್ರೌಢಶಾಲೆ ನೆಹರೂ ಕಾಲೋನಿಯ ವಿದ್ಯಾರ್ಥಿನಿ ಸಭಾ ಅಲಿಯಾ ಇಬ್ಬರಿಗೂ ಸಮಾಧಾನಕರ ಬಹುಮಾನವಾಗಿ ತಲಾ ರೂ.5,000 ನಗದು ಪ್ರಶಸ್ತಿ ಲಭಿಸಿದೆ. ಸಾಧನೆಗೈದ ಮೂವರೂ ವಿದ್ಯಾರ್ಥಿಗಳನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ ಹಾಗೂ ಬಳ್ಳಾರಿಯ ಜಿಲ್ಲಾ ಅಂತರ್ಜಲ ಅಭಿವೃದ್ಧಿ ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಸಂತ್ ಅವರು ಅಭಿನಂದಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

# ನಶಾ ಮುಕ್ತ ಭಾರತ: ಕೊಟ್ಟೂರು ಐಟಿಐನಲ್ಲಿ ಜಾಗೃತಿ ಕಾರ್ಯಕ್ರಮ



**ಹೊಸಪೇಟೆ ಧ್ವನಿ ನ್ಯೂಸ್ :**

**ಕೊಟ್ಟೂರು :** ತಾಲ್ಲೂಕಿನ ಶ್ರೀ ಗೌರಮ್ಮ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ (ಐಟಿಐ) ನಶಾ ಮುಕ್ತ ಭಾರತ ಅಭಿಯಾನದಡಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಿಷನ್ ಶಕ್ತಿ ಸಂಯೋಜಕಿ ವಿದ್ಯಾ ಮಾತನಾಡಿ, ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಕಾನೂನು ನಿಯಮಗಳ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಕಾನೂನಿನ ಅರಿವು ಹೊಂದುವುದರ ಜೊತೆಗೆ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದರು.

ತಂಬಾಕು ನಿಯಂತ್ರಣ ಕೋಶದ ಸಮಾಜ ಕಾರ್ಯಕರ್ತ ಭೋಜರಾಜ ಮಾತನಾಡಿ, ತಂಬಾಕು ಮತ್ತು ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳು ಹಾಗೂ ಆರೋಗ್ಯಕರ ಜೀವನದ ಮಹತ್ವದ ಬಗ್ಗೆ ತಿಳಿಸಿದರು.

ಮಿಷನ್ ಶಕ್ತಿ ಯೋಜನೆ ಪ್ರತಿನಿಧಿ ಅನ್ನಪೂರ್ಣ ಟಿ. ಅವರು, ಮಿಷನ್ ಶಕ್ತಿ ಯೋಜನೆಯ ಉದ್ದೇಶ, ಮಹಿಳಾ ಸುರಕ್ಷತೆ ಮತ್ತು ಸಬಲೀಕರಣದ ಉಪಕ್ರಮಗಳು ಹಾಗೂ ಮೊಬೈಲ್‌ನ ಸುರಕ್ಷಿತ ಬಳಕೆ ಕುರಿತು ಜಾಗೃತಿ ಮೂಡಿಸಿದರು.

ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಹಾಲಿ ಶಾಸಕ ನೇಮಿರಾಜನಾಯ್ಕ್ ಮತ್ತು ಮಾಜಿ ಶಾಸಕ ಎಲ್.ಭೀಮಾನಾಯ್ಕ್ ಅವರೇ, ಯೂಟ್ಯೂಬ್ ಕಚ್ಚಾಟ ಬಿಡಿ; ಮೊದಲು ರಸ್ತೆ ಗುಂಡಿ ಮುಚ್ಚಿ!

# ನಿಮ್ಮ ರಾಜಕೀಯ ಜಿದ್ದಾಜಿದ್ದಿಗೆ ಜನರೇಕೆ ಬಲಿಪಶುಗಳಾಗಬೇಕು? ಹಗರಿ ಗಜಾಪುರ ಗಡಿ ಗ್ರಾಮದ ರಸ್ತೆ ಗೋಳು ಶಾಸಕರಿಗೆ ಕಾಣಿಸುತ್ತಿಲ್ಲವೇ?





**ಕೆ.ನೇಮರಾಜ್ ನಾಯ್ಕ್**
ಹಾಲಿ ಶಾಸಕರು



**ಭೀಮಾನಾಯ್ಕ್**
ಮಾಜಿ ಶಾಸಕರು



**ಕೊಟ್ಟೂರು :** ಹಗರಿಬೊಮ್ಮನ ಹಳ್ಳಿ ಕ್ಷೇತ್ರದಲ್ಲಿ ರಸ್ತೆ ಗುಂಡಿಗಳಿಗಿಂತ ರಾಜಕೀಯ ಆರೋಪ-ಪ್ರತ್ಯಾರೋಪಗಳೇ ಹೆಚ್ಚಾಗಿವೆಯೇ? ಎನ್ನುವ ಆರೋಪಗಳ ಮಧ್ಯೆ

ಕ್ಷೇತ್ರದಾದ್ಯಂತ ಹದಗೆಟ್ಟ ರಸ್ತೆಗಳು, ಎಲ್ಲೆಂದರಲ್ಲಿ ಗುಂಡಿಗಳು, ಸಂಚಾರಕ್ಕೆ ತೊಂದರೆ ಅನುಭವಿಸುತ್ತಿರುವ ಜನರು?ಇದು ಇಂದಿನ ವಾಸ್ತವಿಕ ಸಮಸ್ಯೆ. ಆದ-ರೆ, ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಹಾಲಿ ಶಾಸಕ ನೇಮಿರಾಜನಾಯ್ಕ್ ಮತ್ತು ಮಾಜಿ ಶಾಸಕ ಎಲ್.ಭೀಮಾನಾಯ್ಕ್ ಪರಸ್ಪರ ಆರೋಪ ಪ್ರತ್ಯಾರೋಪ ಮಾಡುತ್ತಾ, ತಮ್ಮ ತಮ್ಮ ಬೆಂಬಲಿಗರ ಮೂಲಕ ಯೂಟ್ಯೂಬ್‌ಗಳಲ್ಲಿ ಸುದ್ದಿಗಳನ್ನು ಹರಿಬಿಡುವ ರಾಜಕೀಯ ಮೇಲಾಟದಲ್ಲಿ ತೊಡಗಿದ್ದಾ-ರೆ ಎಂಬ ಟೀಕೆಗಳು ಕೇಳಿಬರುತ್ತಿವೆ.

ಹಾಲಿ ಶಾಸಕ ನೇಮಿರಾಜನಾಯ್ಕ್ ಅವರೇ, ಮೊದಲು ನಿಮ್ಮ ಅಧಿಕಾರಾವಧಿಯಲ್ಲಿ ರಸ್ತೆ ಅಭಿವೃದ್ಧಿಗೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ತಿಳಿಸಿ. ಯಾವ ರಸ್ತೆಗೆ ಅನುದಾನ ಬಿಡುಗಡೆಯಾಗಿದೆ? ಯಾವ ಕಾಮಗಾರಿ ಪೂರ್ಣಗೊಂಡಿದೆ? ಯಾವ ರಸ್ತೆ ಕಾಮಗಾರಿ ಬಾಕಿ ಉಳಿದಿದೆ? ಜನರಿಗೆ ಈ ಪ್ರಶ್ನೆಗಳಿಗೆ ಉತ್ತರ ಬೇಕಿದೆ.

ಮಾಜಿ ಶಾಸಕ ಎಲ್.ಭೀಮಾನಾಯ್ಕ್ ಅವರೇ, ನಿಮ್ಮ ಅಧಿಕಾರಾವಧಿಯಲ್ಲಿ ರಸ್ತೆಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು ಎಂಬುದನ್ನೂ ಜನರ ಮುಂದೆ ಇಡಿ. ಹಿಂದಿನ ತಪ್ಪುಗಳನ್ನು ತೋರಿಸುವುದಷ್ಟೇ ರಾಜಕೀಯ ಕರ್ತವ್ಯವಲ್ಲ; ಜನರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದೂ ಜವಾಬ್ದಾರಿಯಾಗಿದೆ.

ಯೂಟ್ಯೂಬ್‌ನಲ್ಲಿ ಆರೋಪಗಳ ಸುರಿಮಳೆ; ರಸ್ತೆಯಲ್ಲಿ ಮಾತ್ರ ಗುಂಡಿಗಳ ದರ್ಬಾರ್!

ಒಬ್ಬರು ಮತ್ತೊಬ್ಬರ ವಿರುದ್ಧ ಆರೋಪ ಮಾಡುವುದು, ಬೆಂಬಲಿಗರಿಂದ ವಿಡಿಯೊಗಳನ್ನು ಹರಿಬಿಡುವುದು, ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಮೇಲಾಟ ನಡೆಸುವುದು?ಇದರಿಂದ ಜನರ ರಸ್ತೆ ಸಮಸ್ಯೆ ಬಗೆಹರಿಯುತ್ತದೆಯೇ?

ರಸ್ತೆಗಳ ದುಸ್ಥಿತಿಯಿಂದ ವಾಹನ ಸವಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಮತ್ತು ರೋಗಿಗಳು ಪ್ರತಿನಿತ್ಯ ತೊಂದರೆ ಎದುರಿಸುತ್ತಿದ್ದಾರೆ. ಮಳೆ ಬಂದರೆ ಗುಂಡಿಗಳಲ್ಲಿ ನೀರು ನಿಂತು ರಸ್ತೆ ಮತ್ತಷ್ಟು ಅಪಾಯಕಾರಿಯಾಗುತ್ತದೆ.

ಆದರೆ, ರಾಜಕೀಯ ನಾಯಕರ ಆರೋಪ-ಪ್ರತ್ಯಾರೋಪಗಳ ನಡುವೆ ಜನರ ಸಮಸ್ಯೆಗಳು ಮಾತ್ರ ಹಾಗೆಯೇ ಉಳಿದಿವೆ.

ಜನರಿಗೆ ಬೇಕಿರುವುದು ಪ್ರಚಾರವಲ್ಲ, ಅಭಿವೃದ್ಧಿ!

ಹಾಲಿ ಮತ್ತು ಮಾಜಿ ಶಾಸಕರು ಪರಸ್ಪರ ದೋಷಾರೋಪಣೆ ಮಾಡುವುದನ್ನು ಬಿಟ್ಟು, ಕ್ಷೇತ್ರದ ಹದಗೆಟ್ಟ ರಸ್ತೆಗಳ ಪಟ್ಟಿಯನ್ನು ಸಿದ್ಧಪಡಿಸಲಿ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಲಿ.

> ಹಗರಿ ಗಜಾಪುರ ರಸ್ತೆ ದುರಸ್ತಿ ಬಗ್ಗೆ ಹಲವಾರು ಬಾರಿ ಹೇಳಿದ್ದೇನೆ. ಸರ್ಕಾರದಿಂದ ಅನುದಾನ ಬಂದಿಲ್ಲ. ಹಾಗಾಗಿ ಮಾಡಿಲ್ಲ. ನಾನು ನನ್ನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವುದಿಲ್ಲ ಅಂತ ಎಲ್ಲೂ ಹೇಳಿಲ್ಲ. ಸರ್ಕಾರದ ಗಮನಕ್ಕೂ ತಂದಿದ್ದೇನೆ. ಅನುದಾನ ಬಂದ ಮೇಲೆ ತಕ್ಷಣ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳುತ್ತೇನೆ.
> **ನೇಮಿರಾಜನಾಯ್ಕ್, ಶಾಸಕರು,**
> ಹಗರಿಬೊಮ್ಮನಹಳ್ಳಿ ಕ್ಷೇತ್ರ.

ಅನುದಾನದ ಲಭ್ಯತೆ ಪರಿಶೀಲಿಸಿ, ಕಾಮಗಾರಿಗಳಿಗೆ ಕಾಲಮಿತಿ ನಿಗದಿಪಡಿಸಲಿ.

ರಾಜಕೀಯ ಕಚ್ಚಾಟದಲ್ಲಿ ಯಾರು ಗೆದ್ದರು ಎಂಬುದಕ್ಕಿಂತ, ಜನರ ರಸ್ತೆ ಸಮಸ್ಯೆ ಬಗೆಹರಿಯಿತೇ ಎಂಬುದೇ ಮುಖ್ಯ.

ಹಾಲಿ ಶಾಸಕರೇ, ಜನರು ನಿಮಗೆ ಅಧಿಕಾರ ಕೊಟ್ಟಿರುವುದು ಆರೋಪಗಳಿಗೆ ಉತ್ತರಿಸಲು ಮಾತ್ರವಲ್ಲ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲೂ ಹೌದು. ಮಾಜಿ ಶಾಸಕರೇ, ನಿಮ್ಮ ಅನುಭವವನ್ನು ಜನರ ಸಮಸ್ಯೆಗಳ ಪರಿಹಾರಕ್ಕೆ ಬಳಸಿಕೊಳ್ಳಿ.

ಕೊಟ್ಟೂರು ಸಂಪರ್ಕ ರಸ್ತೆಗೆ ಐದು ದಶಕಗಳ ನರಕಯಾತನೆ; 3,000 ಮತಗಳ ಮೇಲೆ ಗ್ರಾಮಸ್ಥರ ಎಚ್ಚರಿಕೆ!

" ರಸ್ತೆ ಮಾಡದಿದ್ದರೆ 2028ರಲ್ಲಿ ಉತ್ತರ ಕೊಡುತ್ತೇವೆ" ಎಂದ ಹಗರಿ ಗಜಾಪುರ ಗ್ರಾಮಸ್ಥರು

ಐದು ದಶಕಗಳಾದರೂ ರಸ್ತೆ ಭಾಗ್ಯವಿಲ್ಲ! ದಿನನಿತ್ಯದ ಬದುಕಿಗೆ ಅಗತ್ಯವಾದ ಕೊಟ್ಟೂರು ಸಂಪರ್ಕ ರಸ್ತೆಯ ದುಸ್ಥಿತಿಗೆ ಮುಕ್ತಿ ಸಿಗುತ್ತಿಲ್ಲ. ಹರಪನಹಳ್ಳಿ ಮತ್ತು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳ ಗಡಿ ಭಾಗದಲ್ಲಿರುವ ಹಗರಿ ಗಜಾಪುರ ಗ್ರಾಮದ ರಸ್ತೆ ಅಭಿವೃದ್ಧಿಗೆ ನಿರ್ಲಕ್ಷ್ಯ ತೋರುತ್ತಿರುವ ಆರೋಪ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕರ ವಿರುದ್ಧ ಕೇಳಿಬಂದಿದೆ.

ಹಗರಿ ಗಜಾಪುರ ಗ್ರಾಮದ ಜನರಿಗೆ ವ್ಯಾಪಾರ, ವಹಿವಾಟು, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳಿಗೆ ಕೊಟ್ಟೂರು ಪ್ರಮುಖ ಕೇಂದ್ರವಾಗಿದೆ. ಹೀಗಾಗಿ, ಕೊಟ್ಟೂರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಗ್ರಾಮಸ್ಥರ ದೈನಂದಿನ ಬದುಕಿನ ಪ್ರಮುಖ ಕೊಂಡಿಯಾಗಿದೆ. ಆದರೆ, ದಶಕಗಳಿಂದ ರಸ್ತೆ ಹದಗೆಟ್ಟಿದ್ದರೂ ದುರಸ್ತಿ ಅಥವಾ ಮರುನಿರ್ಮಾಣಕ್ಕೆ ಸೂಕ್ತ ಕ್ರಮ ಕೈಗೊಳ್ಳದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಒಂದೇ ರಸ್ತೆ, ಎರಡು ಕ್ಷೇತ್ರ; ಅಭಿವೃದ್ಧಿಯಲ್ಲಿ ತಾರತಮ್ಯವೇ?

ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದ ರಸ್ತೆಯನ್ನು ಈಗಾಗಲೇ ಮರುನಿರ್ಮಾಣ ಮಾಡಲಾಗಿದೆ ಎನ್ನುವ ಗ್ರಾಮಸ್ಥರು, ಹಗರಿಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರುವ ಹಗರಿ ಗಜಾಪುರದ ರಸ್ತೆ ಮಾತ್ರ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

"ಹಗರಿ ಗಜಾಪುರ ನಮ್ಮ ವಿಧಾನಸಭಾ ಕ್ಷೇತ್ರ-ಕ್ಕೆ ಬರುವುದಿಲ್ಲ ಎಂಬ ಕಾರಣಕ್ಕೆ ಶಾಸಕರು ಕಣ್ಮುಚ್ಚಿ ಕುಳಿತಿದ್ದಾರೆಯೇ? ನಮ್ಮೂರಿನ ಜನರು ಪ್ರತಿನಿತ್ಯ ಇದೇ ರಸ್ತೆಯಲ್ಲಿ ಸಂಚರಿಸಬೇಕು. ವ್ಯಾಪಾರಕ್ಕೆ ಹೋಗುವವರು, ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ಆಸ್ಪತ್ರೆಗೆ ಹೋಗುವ ರೋಗಿಗಳು ಅನುಭವಿಸುವ ಸಂಕಷ್ಟ ಶಾಸಕರಿಗೆ ಕಾಣಿಸುತ್ತಿಲ್ಲವೇ?" ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ.

ಸುಮಾರು 45ರಿಂದ 50 ವರ್ಷಗಳಿಂದ ರಸ್ತೆಯ ದುಸ್ಥಿತಿ ಮುಂದುವರಿದಿದೆ ಎನ್ನುವ ಗ್ರಾಮಸ್ಥರು, ಜನಪ್ರತಿನಿಧಿಗಳ ಭರವಸೆಗಳಿಗಿಂತ ರಸ್ತೆ ಅಭಿವೃದ್ಧಿಯೇ ತಮಗೆ ಮುಖ್ಯ ಎಂದು ಹೇಳಿದ್ದಾರೆ.

ಕೊಟ್ಟೂರಿನ 3,000 ಮತಗಳ ಮೇಲೆ ಕಣ್ಣು!

ಹಗರಿ ಗಜಾಪುರ ಗ್ರಾಮದ ಅನೇಕ ಕುಟುಂಬಗಳ ಸಂಬಂಧಿಕರು ಕೊಟ್ಟೂರು ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಅವರ ಮತಗಳ ಸಂಖ್ಯೆ ಸುಮಾರು 3,000 ಇರಬಹುದು ಎಂದು ಗ್ರಾಮಸ್ಥರು ಅಂದಾಜಿಸಿದ್ದಾರೆ.

"ನಮ್ಮೂರಿನ ರಸ್ತೆಯ ಸಮಸ್ಯೆಯನ್ನು ಶಾಸಕರು ನಿರ್ಲಕ್ಷಿಸಿದರೆ, ಕೊಟ್ಟೂರಿನಲ್ಲಿರುವ ನಮ್ಮ ಸಂಬಂಧಿಕರಿಗೆ ಈ ವಿಚಾರ ತಿಳಿಸಿ, ಮುಂಬರುವ ಚುನಾವಣೆಯಲ್ಲಿ ಈಗಿನ ಶಾಸಕರಿಗೆ ಮತ ಹಾಕದಂತೆ ಮನವಿ ಮಾಡುತ್ತೇವೆ. ಐದು ದಶಕಗಳಿಂದ ರಸ್ತೆಗಾಗಿ ಕಾಯುತ್ತಿದ್ದೇವೆ. ಇನ್ನಾದರೂ ಅಭಿವೃದ್ಧಿ ಮಾಡುತ್ತಾರೆಯೇ ನೋಡುತ್ತೇವೆ. ಇಲ್ಲದಿದ್ದರೆ 2028ರ ಚುನಾವಣೆಯಲ್ಲಿ ನಮ್ಮ ಉತ್ತರ ನೀಡುತ್ತೇವೆ" ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಓಟಿನ ಆಸೆಗಾದರೂ ರಸ್ತೆ ಭಾಗ್ಯ ಕಲ್ಪಿಸುತ್ತಾರೆಯೇ?

ಚುನಾವಣೆ ಬಂದಾಗ ಜನರ ಮತಕ್ಕಾಗಿ ಮನೆಮನೆಗೆ ತೆರಳುವ ರಾಜಕಾರಣಿಗಳು, ಜನರ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ವಿಚಾರದಲ್ಲೂ ಅಷ್ಟೇ ಆಸಕ್ತಿ ತೋರಿಸಬೇಕೆಂಬುದು ಗ್ರಾಮಸ್ಥರ ಆಗ್ರಹವಾಗಿದೆ.

ಹಗರಿ ಗಜಾಪುರದ ರಸ್ತೆ ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎಂಬುದನ್ನು ಸ್ಪಷ್ಟಪಡಿಸಿ, ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಬೇಕು. ಅಗತ್ಯ ಅನುದಾನ ಬಿಡುಗಡೆ ಮಾಡಿ, ರಸ್ತೆ ಮರುನಿರ್ಮಾಣಕ್ಕೆ ಕಾಲಮಿತಿ ನಿಗದಿಪಡಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಐದು ದಶಕಗಳ ರಸ್ತೆ ಗೋಳಿಗೆ ಇನ್ನಾದರೂ ಮುಕ್ತಿ ಸಿಗುತ್ತದೆಯೇ? 3,000 ಮತಗಳ ಎಚ್ಚರಿ-ಕೆ ಶಾಸಕರ ಗಮನ ಸೆಳೆಯುತ್ತದೆಯೇ? ಅಥವಾ ಹಗರಿ ಗಜಾಪುರದ ಜನರು 2028ರವರೆಗೂ ಕಾಯಬೇಕೇ?

# ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಇಂಡಿಯಾ ಒಕ್ಕೂಟದ ಪ್ರತಿಭಟನೆ ಮತ್ತಷ್ಟು ತೀವ್ರ



**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವ ಇಂಡಿಯಾ ಒಕ್ಕೂಟ ಸೋಮವಾರದಿಂದ ಕಾನೂನು ಹೋರಾಟಕ್ಕೂ ಮುಂದಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 2023ರಲ್ಲಿ ಜಾರಿಗೆ ತಂದಿರುವ ಮುಖ್ಯ ಚುನಾವಣಾ ಆಯುಕ್ತರು

ಮತ್ತು ಚುನಾವಣಾ ಆಯುಕ್ತರಿಗೆ ಕಾನೂನು ರಕ್ಷಣೆ ನೀಡುವ ಕಾನೂನನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆಯನ್ನು ತೀವ್ರಗೊಳಿಸಿವೆ. ಈ ಕುರಿತು ಬೆಂಗಳೂರಿನಲ್ಲಿ ಹೇಳಿಕೆ ನೀಡಿರುವ ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ, ಭಾರತದ ರಾಷ್ಟ್ರಪತಿ ಅಥವಾ ದೇಶದ ಮುಖ್ಯ ನ್ಯಾಯಮೂರ್ತಿಗಳಿಗೂ ಇಲ್ಲದಂತಹ ರಕ್ಷಣೆಯನ್ನು ಪ್ರಧಾನಿ ಮೋದಿ ಅವರು ಮುಖ್ಯ ಚುನಾವಣಾ ಆಯುಕ್ತರಿಗೆ ನೀಡಲಾಗಿದೆ ಎಂದರು.

ಚುನಾವಣಾ ಆಯುಕ್ತರಿಗೆ ಕಾನೂನಿನ ಮೂಲಕ ವಿಶೇಷ ರಕ್ಷಣೆಯನ್ನು ನೀಡಿದ ಬಳಿಕ ಮತಗಳ ಕಳ್ಳತನ, ಇವಿಎಂ ದುರ್ಬಳಕೆ ಮತ್ತು ಚುನಾವಣಾ ವಂಚನೆ ಪ್ರಾರಂಭವಾಗಿದೆ. ಮುಖ್ಯ ಚುನಾವಣಾ ಆಯುಕ್ತರು ಎಷ್ಟೇ ತಪ್ಪುಗಳನ್ನು ಮಾಡಿದರೂ ಆ ಕ್ರಮಗಳಿಗೆ ಹೊಣೆಗಾರಿಕೆಯಿಂದ ಜೀವಮಾನದ ವಿನಾಯಿತಿಯನ್ನು ಅವರಿಗೆ ನೀಡಲಾಗಿದೆ ಎಂದು ಖರ್ಗೆ ಹೇಳಿದರು. ಇದು ಜನರ ಮತಗಳನ್ನು ಕಸಿದುಕೊಳ್ಳುವ ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ನೇರ ಪ್ರಯತ್ನವಾಗಿದೆ. ಜನರ ವಿರುದ್ಧ ವಂಚನೆ ಎಸಗುವ ಪಿತೂರಿಯಾಗಿದೆ. ಇದರ ವಿರುದ್ಧ ನಮ್ಮ ಹೋರಾಟವನ್ನು ಮುಂದುವರಿಸುತ್ತೇವೆ ಎಂದು ಅವರು ತಿಳಿಸಿದರು. ಈಗಾಗಲೇ ಇಂಡಿಯಾ ಮೈತ್ರಿಕೂಟವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ಮನವಿ ಪತ್ರವನ್ನು ಸಲ್ಲಿಸಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರನ್ನು ಭೇಟಿಯಾಗಲು ಅನುಮತಿ ನಿರಾಕರಿಸಲಾಗಿದೆ. ಅರ್ಜಿಯನ್ನು ಅವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಅರ್ಜಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧದ ಆರೋಪಗಳನ್ನು ವಿವರಿಸಲಾಗುವುದು.

ನಿವೃತ್ತಿಯ ಅನಂತರ ಅವರನ್ನು ತನಿಖೆ ಅಥವಾ ಶಿಕ್ಷೆಯಿಂದ ರಕ್ಷಿಸುವ 2023ರ ಕಾನೂನು ರದ್ದುಗೊಳಿಸಲು ಮನವಿ ಮಾಡಲಾಗುವುದು ಎಂದು ಹೇಳಿದರು.

ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ ಪ್ರಕ್ರಿಯೆಯಲ್ಲಿ ಮುಖ್ಯ ನ್ಯಾಯಮೂರ್ತಿಗಳನ್ನು ಹೊರಗಿಟ್ಟಿರುವುದರ ಬಗ್ಗೆಯೂ ಇದರಲ್ಲಿ ಉಲ್ಲೇಖಿಸಲಾಗುವುದು ಎಂದ ಅವರು, ಎಲೆಕ್ಟ್ರಾನಿಕಲಿ ಟ್ರಾನ್ಸ್‌ಮಿಟೆಡ್ ಪೋಸ್ಟಲ್ ಬ್ಯಾಲೆಟ್ ಸಿಸ್ಟಮ್ ಮೂಲಕ ಮತ ಕಳ್ಳತನ ನಡೆದಿದೆ ಎಂಬ ಆರೋಪವನ್ನು ಇದು ಎತ್ತಿ ತೋರಿಸಲಿದೆ. ಈ ಆರೋಪಗಳಿಗೆ ಸಂಬಂಧಿಸಿ ದಾಖಲೆಗಳನ್ನು ಕೂಡ ಒದಗಿಸುವುದಾಗಿ ತಿಳಿಸಿದರು.

ಕಾಂಗ್ರೆಸ್ ತನ್ನ ಎಲ್ಲಾ ಲೋಕಸಭೆ ಮತ್ತು ರಾಜ್ಯಸಭಾ ಸಂಸದರಿಗೆ ದೆಹಲಿಯಲ್ಲೇ ಇರುವಂತೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗೋವಾಕ್ಕೆ ನಿಗದಿಯಾಗಿದ್ದ ಭೇಟಿಯನ್ನು ಮುಂದೂಡಿದ್ದಾರೆ. ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಮತ್ತು ಇತರ ನಾಯಕರನ್ನು ಭೇಟಿಯಾಗಿದ್ದಾ-ರೆ. ಇಂಡಿಯಾ ಮೈತ್ರಿಕೂಟದ ಎಲ್ಲಾ ನಾಯಕರು ದೆಹಲಿಯಲ್ಲಿ ಸೇರಿದ್ದು, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ದೆಹಲಿಯಲ್ಲೇ ಉಳಿದುಕೊಂಡಿದ್ದಾರೆ. ರಾಷ್ಟ್ರೀಯ ಜನತಾ ದಳದ ಮುಖ್ಯಸ್ಥ ತೇಜಸ್ವಿ ಯಾದವ್ ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಕೂಡ ದೆಹಲಿಗೆ ಆಗಮಿಸಲಿದ್ದಾರೆ.

## ಹೆಬ್ಬಾಳ ಕಿರು ಸುರಂಗ ಯೋಜನೆ ಅವೈಜ್ಞಾನಿಕ: 1,350 ಕೋಟಿ ರೂ. ಸಾರ್ವಜನಿಕ ಹಣ ಪೋಲು: ಸಂಸದ ತೇಜಸ್ವಿ ಸೂರ್ಯ ಆಕ್ಷೇಪ



**ಬೆಂಗಳೂರು:** ಪ್ರಸ್ತಾವಿತ 2 ಕಿ.ಮೀ ಉದ್ದದ ಹೆಬ್ಬಾಳ ಶಾರ್ಟ್ ಟನಲ್ ಯೋಜನೆಯನ್ನು ಅವೈಜ್ಞಾನಿಕ ಎಂದು ಟೀಕಿಸಿರುವ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು, ಯೋಜನೆಯಿಂದ 1,350 ಕೋಟಿ ರೂ. ವ್ಯರ್ಥವಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಯೋಜನೆ ಕುರಿತು ಪ್ರತಿಕ್ರಿಯಿಸಿರುವ ಅವರು, ಈ ಯೋಜನೆಗಾಗಿ 1,128 ಮರಗಳನ್ನು ಕಡಿಯಬೇಕಾಗುತ್ತದೆ. ಹೆಬ್ಬಾಳ ಕೆರೆಯಲ್ಲಿ ಪ್ರವಾಹದ ಅಪಾಯ ಹೆಚ್ಚಿಸುವುದರ ಜೊತೆಗೆ ಅಂತರ್ಜಲದ ಮೇಲೂ ಪರಿಣಾಮ ಬೀರಬಹುದು ಎಂದು ಆರೋಪಿಸಿದ್ದಾರೆ.

ವಾಹನಗಳು ಜಂಕ್ಷನ್ ಅನ್ನು ತಪ್ಪಿಸಿ ಸುರಂಗದ ಮೂಲಕ ಸಂಚರಿಸಿದರೂ, ಕೇವಲ 2 ಕಿ.ಮೀ. ಮುಂದಕ್ಕೆ ಅದೇ ರಸ್ತೆಗೆ ಮರಳಬೇಕಾಗುತ್ತದೆ. ಇಂತಹ ಯೋಜನೆಯ ಅಗತ್ಯವೇನು ಎಂದು ಅವರು ಪ್ರಶ್ನಿಸಿದ್ದಾರೆ.

ಸಂಚಾರ ದಟ್ಟಣೆ ನಿವಾರಿಸಲು ರಾಜ್ಯ ಸರ್ಕಾರ ಮೇಲ್ಸೇತುವೆ ಕಾರಿಡಾರ್ ನಿರ್ಮಾಣಕ್ಕೂ ಮುಂದಾಗಿದೆ. ಆದರೆ, ಸುರಂಗ ಯೋಜನೆಯಿಂದ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ.

ಹೆಬ್ಬಾಳದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವುದರಿಂದ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ತಿಳಿಸಿದ್ದು, ಯೋಜನೆಯನ್ನು ಕೈಬಿಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಒತ್ತಾಯಿಸಿದ್ದಾರೆ.

ಇದೇ ವೇಳೆ ನಿರ್ಮಾಣ ಹಂತದಲ್ಲಿರುವ ನೀಲಿ ಮಾರ್ಗದ ಮೆಟ್ರೋ, ಯೋಜಿತ ಕೆಂಪು ಮತ್ತು ಕಿತ್ತಳೆ ಮಾರ್ಗಗಳು ಹಾಗೂ ಉಪನಗರ ರೈಲು ಸಂಪರ್ಕವನ್ನು ಅವರು ಉಲ್ಲೇಖಿಸಿದ್ದಾರೆ.

ಕೆಂಪು ಮಾರ್ಗದಲ್ಲಿ ಪ್ರಸ್ತಾಪಿಸಲಾಗಿದ್ದ ಪಶುವೈದ್ಯಕೀಯ ಕಾಲೇಜು ಮೆಟ್ರೋ ನಿಲ್ದಾಣವನ್ನು ಕೈಬಿಡಲಾಗಿದೆ ಎಂದು ಆರೋಪಿಸಿದ್ದಾರೆ. ಈ ನಿಲ್ದಾಣದಿಂದ ಪ್ರತಿದಿನ 18,000ಕ್ಕೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲವಾಗಬಹುದಿತ್ತು. ಆದರೆ, ಸುರಂಗ ಮತ್ತು ಮೇಲ್ಸೇತುವೆ ಯೋಜನೆಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ನಿಲ್ದಾಣವನ್ನು ಕೈಬಿಡಲಾಗಿದೆ ಎಂದು ಅವರು ದೂರಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ರಾಜ್ಯ ಹಣಕಾಸು ಇಲಾಖೆಯ ಮೌಲ್ಯಮಾಪನಗಳನ್ನು ಉಲ್ಲೇಖಿಸಿದ ಸಂಸದರು, ಮೆಟ್ರೋಗೆ ಹೋಲಿಸಿದರೆ ಸುರಂಗ ಯೋಜನೆಯಲ್ಲಿ ಪ್ರತಿ ಪ್ರಯಾಣಿಕರಿಗೆ ತಗಲುವ ವೆಚ್ಚ ಆರು ಪಟ್ಟು ಹೆಚ್ಚಾಗಲಿದೆ ಎಂದು ಹೇಳಿದ್ದಾರೆ.

ಯೋಜನೆಯ ವೆಚ್ಚ, ವಿನ್ಯಾಸ ಮತ್ತು ಸಂಚಾರ ದಟ್ಟಣೆಯ ಸಂಭಾವ್ಯ ಸಮಸ್ಯೆಗಳ ಬಗ್ಗೆಯೂ ಹಣಕಾಸು ಇಲಾಖೆ ಕಳವಳ ವ್ಯಕ್ತಪಡಿಸಿದೆ ಎಂದು ತಿಳಿಸಿದ್ದಾರೆ. ಬೆಂಗಳೂರು ನಗರವು ವಿಸ್ತಾರವಾದ ಮತ್ತು ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆ ಜಾಲವನ್ನು ತ್ವರಿತವಾಗಿ ನಿರ್ಮಿಸುವತ್ತ ಗಮನಹರಿಸಬೇಕು. ಹೆಬ್ಬಾಳ ಸುರಂಗ ಯೋಜನೆಯನ್ನು ಕೈಬಿಡುವಂತೆ ಆಗ್ರಹಿಸಿದ್ದಾರೆ.

## ಸಿಮೆಂಟ್ ಸಾಗಿಸುವ ಬಲ್ಕರ್ ಟ್ಯಾಂಕರ್‌ನಲ್ಲಿ 1 ಕೋಟಿ ಮೌಲ್ಯದ ಅಕ್ರಮ ಮದ್ಯ ಪತ್ತೆ



**ಅಲಿರಾಜ್‌ಪುರ:** ಸಿಮೆಂಟ್ ಸಾಗಿಸುವ ಬಲ್ಕರ್ ಟ್ಯಾಂಕರ್‌ನಲ್ಲಿ ಅಕ್ರಮವಾಗಿ ಬಚ್ಚಿಟ್ಟು ಸಾಗಿಸುತ್ತಿದ್ದ ಸುಮಾರು 1 ಕೋಟಿ ಮೌಲ್ಯದ ಮದ್ಯವನ್ನು ಮಧ್ಯಪ್ರದೇಶದ ಅಲಿರಾಜ್‌ಪುರ ಜಿಲ್ಲೆಯಲ್ಲಿ ಪೊಲೀಸರು ಜಪ್ತಿ ಮಾಡಿದ್ದಾರೆ.ಈ ಸಂಬಂಧ ರಾಜಸ್ಥಾನದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದ್ದು, ಹರಿಯಾಣದಿಂದ ಗುಜರಾತ್‌ಗೆ ಮದ್ಯ ಸಾಗಿಸುತ್ತಿದ್ದ ಆರೋಪ ಕೇಳಿಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯರಾತ್ರಿ ಖಂಡ್ವಾ-ಬರೋಡಾ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ಪೊಲೀಸರು, ಖಚಿತ ಮಾಹಿತಿ ಆಧರಿಸಿ ರಾಜಸ್ಥಾನ ನೋಂದಣಿಯ ಬಲ್ಕರ್ ಟ್ಯಾಂಕರ್ ಅನ್ನು ತಡೆದು ಪರಿಶೀಲಿಸಿದರು.

ಈ ವೇಳೆ ಸಿಮೆಂಟ್ ಸಾಗಿಸುವ ಟ್ಯಾಂಕರ್‌ನಲ್ಲಿ ಅಕ್ರಮವಾಗಿ ಬಚ್ಚಿಟ್ಟಿದ್ದ 1,426 ಬಾಕ್ಸ್ ಮದ್ಯ ಪತ್ತೆಯಾಗಿದೆ. ವಶಪಡಿಸಿಕೊಂಡ ಮದ್ಯದ ಮೌಲ್ಯ ಸುಮಾರು 1 ಕೋಟಿ ಎಂದು ಅಂದಾಜಿಸಲಾಗಿದೆ.ಬಂಧಿತನನ್ನು ರಾಜಸ್ಥಾನದ ಬಾರ್ಮೇರ್ ಜಿಲ್ಲೆಯ ನಿವಾಸಿ ಹೆಮಾರಾಮ್ ಜಾಟ್ (30) ಎಂದು ಗುರುತಿಸಲಾಗಿದೆ.

ಗುಜರಾತ್‌ನಲ್ಲಿ ಮದ್ಯ ನಿಷೇಧವಿದೆ. ಇಂತಹ ರಾಜ್ಯಕ್ಕೆ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ.ಮದ್ಯದ ಮೂಲ, ಸಾಗಾಟದ ಹಿಂದಿರುವ ಜಾಲ ಹಾಗೂ ಪ್ರಕರಣದಲ್ಲಿ ಇತರರು ಭಾಗಿಯಾಗಿದ್ದಾರೆಯೇ ಎಂಬ ಕುರಿತು ಮಧ್ಯಪ್ರದೇಶ ಪೊಲೀಸರು ತನಿಖೆ ಆರಂಭಿಸಿದ್ದಾರೆ

# ಮಳೆ ಕೊರತೆ: ದೈನಂದಿನ ದಿನಸಿ ಬೆಲೆಗಳೂ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುವ ಆತಂಕ ಸೃಷ್ಟಿ



**ಬೆಂಗಳೂರು:** ಸಕ್ಕರೆ ಬೆಲೆ ಏರಿಕೆಯಾಗುತ್ತಿರುವ ಹೊತ್ತಿನಲ್ಲೇ, ಪ್ರಸಕ್ತ ಸಾಲಿನ ಮುಂಗಾರು ಕೈಕೊಟ್ಟಿರುವುದರಿಂದ ಮುಂದಿನ ಜನವರಿ ವೇಳೆಗೆ ಸಕ್ಕರೆ ಮಾತ್ರವಲ್ಲದೇ ದೈನಂದಿನ ದಿನಸಿ ಬೆಲೆಗಳೂ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುವ ಆತಂಕ ಸೃಷ್ಟಿಯಾಗಿದೆ. ದೇಶದ ಸಕ್ಕರೆ ಉದ್ಯಮದಲ್ಲಿ ಕರ್ನಾಟಕದ ಪಾತ್ರ ಮಹತ್ವವಾಗಿದೆ.

ಕಳೆದ ವರ್ಷ ರಾಜ್ಯದಲ್ಲಿರುವ 81 ಸಕ್ಕ-ರೆ ಕಾರ್ಖಾನೆ ಗಳಿಂದ 576 ಲಕ್ಷ ಟನ್ ಕಬ್ಬು ಅರೆಯ ಲಾಗಿತ್ತು. ಕಳೆದ ವರ್ಷ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಇಳುವರಿ ಹೆಚ್ಚಾಗಿದ್ದರಿಂದ ದೇಶದ ಒಟ್ಟು ಸಕ್ಕರೆ ಉತ್ಪಾದನೆ ಶೇ.7ರಷ್ಟು ಏರಿಕೆಯಾಗಿ-ತ್ತು. ಆದರೆ ಈ ಬಾರಿ ಕರ್ನಾಟಕದಲ್ಲಿ ಭೀಕರ ಕ್ಷಾಮ ಆವರಿಸಿರುವುದರಿಂದ, ಶೇ.35ರಿಂದ 40ರಷ್ಟು ಕಬ್ಬು ಇಳುವರಿ ಕಡಿಮೆಯಾಗಲಿದೆ ಎನ್ನುವ ಆತಂಕ ಶುರುವಾಗಿದೆ. ಈಗಾಗಲೇ ದೇಶದಲ್ಲಿ ಸಕ್ಕರೆ ದರ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿದೆ. ಸದ್ಯ ಕೆಜಿ ಸಕ್ಕರೆ ಬೆಲೆ 70 ರು.ಗೇರಿದೆ. ಇಂತಹ ಹೊತ್ತಿನಲ್ಲಿ ಕಬ್ಬಿನ ಇಳುವರಿ ಕರ್ನಾಟಕದಲ್ಲಿಯೂ ಇಳಿಕೆಯಾಗಿರುವುದರಿಂದ ಮುಂದಿನ ದಿನದಲ್ಲಿ ಸಕ್ಕರೆ ದರ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಯಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ, 172ರಿಂದ 230 ಲಕ್ಷ ಟನ್ ಕಬ್ಬಿನ ಇಳುವರಿ ಕುಸಿಯುವ ಸಾಧ್ಯತೆ ಯಿದೆ. ಇದರಿಂದಾಗಿ ಒಟ್ಟಾರೆ ಸಕ್ಕರೆ ಉದ್ಯಮಕ್ಕೆ ಸುಮಾರು 7ರಿಂದ 8 ಸಾವಿರ ಕೋಟಿ ರು. ನಷ್ಟ ವಾಗಲಿದೆ. ಈ ಪ್ರಮಾಣದಲ್ಲಿ ನಷ್ಟ ಉಂಟಾದರೆ ಇದರ ನೇರ ಹೊರೆ ರೈತರಿಗೆ ಬೀಳಲಿದೆ ಎನ್ನುವುದು ಸಕ್ಕರೆ ಬೆಳೆಗಾರರ ಆತಂಕ. ಕಳೆದ ವರ್ಷ ಸುಮಾರು 5.60 ಲಕ್ಷ ಟನ್ ಬಿತ್ತನೆ ಬೀಜ ವಿತರಿಸ ಲಾಗಿತ್ತು. ಈ ವರ್ಷ ಸುಮಾರು ಮೂರು ಲಕ್ಷ ಟನ್ ಬಿತ್ತನೆ ಬೀಜವನ್ನು ರೈತರಿಗೆ ವಿತರಿಸಲಾಗಿದೆ. ಈ ಬಾರಿ ತೀವ್ರ ಮಳೆ ಕೊರತೆಯಿಂದ ಹಲವು ಭಾಗದಲ್ಲಿ ಬಿತ್ತನೆಯಾಗಿಲ್ಲ. ಆದ್ದರಿಂದ ಬಿತ್ತನೆ ಬೀಜದಲ್ಲಿ ಎಷ್ಟು ಫಲವಾಗಲಿದೆ ಎನ್ನುವ ಸ್ಪಷ್ಟತೆ ಯಾರಿಗೂ ಇಲ್ಲ. ಇನ್ನು ರಾಜ್ಯದಲ್ಲಿರುವ ಸುಮಾರು 93 ಲಕ್ಷ ಜಾನುವಾರು, 1.90 ಕೋಟಿ ಕುರಿ-ಮೇಕೆಗಳಿಗೆ ಅಗತ್ಯವಿರುವ 2.75 ಕೋಟಿ ಟನ್ ಮೇವನ್ನು ಯಾವ ರೀತಿಯಲ್ಲಿ ಹೊಂದಿಸಲಾಗುತ್ತದೆ ಎನ್ನುವ ಆತಂಕ ರೈತರಲ್ಲಿ ಮೂಡಿದೆ. ಅಕ್ಟೋಬರ್‌ನಲ್ಲಿಯೇ ಈ ಪ್ರಮಾಣದ ಬರದ ಛಾಯೆಯಿರುವುದರಿಂದ ಮುಂದಿನ ಮೇವರೆಗೆ ಯಾವ ರೀತಿಯಲ್ಲಿ ನಿರ್ವಹಣೆ ಮಾಡಬೇಕು ಎನ್ನುವ ಆತಂಕ ರೈತರು, ಅಧಿಕಾರಿಗಳಲ್ಲಿ ಮೂಡಿದೆ

ಇನ್ನು 2025ರಲ್ಲಿ ರಾಜ್ಯದ ಸುಮಾರು 84 ಲಕ್ಷ ಹೆಕ್ಟೇರ್ ಪ್ರದೇಶದಲ್ಲಾಗಿದ್ದ ಬಿತ್ತನೆಯಿಂದ ಸುಮಾರು 137 ಲಕ್ಷ ಟನ್ ಆಹಾರಧಾನ್ಯ ಉತ್ಪತ್ತಿಯಾಗಿತ್ತು. ಈ ಬಾರಿ ದೇಶದ 18 ರಾಜ್ಯಗಳಲ್ಲಿ ತೀವ್ರ ಬರದ ಕಾರಣಕ್ಕೆ, ಧಾನ್ಯ ಉತ್ಪಾದನೆಯಲ್ಲಿ ತೀವ್ರ ಕೊರತೆಯಾಗಲಿದೆ. ಇನ್ನು 2025ರಲ್ಲಿ ರಾಜ್ಯದ ಸುಮಾರು 84 ಲಕ್ಷ ಹೆಕ್ಟೇರ್ ಪ್ರದೇಶದಲ್ಲಾಗಿದ ದ ಬಿತ್ತನೆಯಿಂದ ಸುಮಾರು 137 ಲಕ್ಷ ಟನ್ ಆಹಾರಧಾನ್ಯ ಉತ್ಪತ್ತಿಯಾಗಿತ್ತು. ಆದರೆ ಈ ಬಾರಿ ತೀವ್ರ ಬರದ ಕಾರಣಕ್ಕೆ, ಸುಮಾರು 58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ.

ತೀವ್ರ ಮಳೆ ಕೊರತೆಯ ಕಾರಣಕ್ಕೆ, ಈ ಪ್ರದೇಶದಲ್ಲಿ ಬಿತ್ತನೆಯಾಗಿರುವ ಬೆಳೆಗಳು ಸಿಗುವುದು ಅನುಮಾನ ಎನ್ನಲಾಗಿದೆ. ಅದರಲ್ಲಿಯೂ ಭತ್ತ, ರಾಗಿ, ಜೋಳ, ಬೇಳೆಕಾಳುಗಳ ಕೊರತೆಯಿಂದಾಗಿ ಜನವರಿ ವೇಳೆಗೆ ರಾಜ್ಯದಲ್ಲಿ ದೈನಂದಿನ ದಿನಸಿ ಸಾಮಗ್ರಿಗಳ ಕೊರತೆಗೆ ಕಾರಣವಾದರೂ ಅಚ್ಚರಿ ಯಿಲ್ಲ ಎನ್ನುವ ಆತಂಕ ಶುರುವಾಗಿದೆ.

ಕೊರತೆಯಾಗುವ ಧಾನ್ಯಗಳನ್ನು ಹೊರ ರಾಜ್ಯದಿಂದ ಪಡೆಯುವ ಆಲೋಚನೆಯಲ್ಲಿ ರಾಜ್ಯ ಸರಕಾರವಿದೆ. ಆದರೆ ದೇಶದ 18 ರಾಜ್ಯಗಳಲ್ಲಿ ಕರ್ನಾಟಕದ ರೀತಿಯಲ್ಲಿಯೇ ಭೀಕರ ಬರ ಎದುರಾ ಗಿರುವುದರಿಂದ ಹೊರರಾಜ್ಯಗಳಿಂದಲೂ ಕರ್ನಾಟಕಕ್ಕೆ ಯಾವ ಪ್ರಮಾಣದಲ್ಲಿ ಸಹಾಯ ಸಿಗಲಿದೆ ಎನ್ನುವ ಪ್ರಶ್ನೆಯಿದೆ. ಆದ್ದರಿಂದ ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ.ಈರೀತಿಆಮದುಮಾಡಿಕೊಂಡರೆ ನಿಶ್ಚಿತವಾಗಿ ದಿನಸಿ ಪದಾರ್ಥದ ಬೆಲೆ ಗಗನಕ್ಕೆ ಏರುವುದು ನಿಶ್ಚಿತ ಎನ್ನುವ ಮಾತುಗಳು ಕೇಳಿ ಬರುತ್ತಿದೆ.

## ತಮಿಳುನಾಡಿಗೆ ಕಾವೇರಿ ನೀರು ಹರಿವು ಕುರಿತ ಆದೇಶ ಮರುಪರಿಶೀಲನೆಗೆ ಮನವಿ: ಸಚಿವ ಚೆಲುವರಾಯ ಸ್ವಾಮಿ



**ನವದೆಹಲಿ:** ಕಾವೇರಿ ನದಿ ಪಾತ್ರದಲ್ಲಿನ ಜಲಾಶಯಗಳಿಗೆ ಒಳ ಹರಿವು ಕಡಿಮೆಯಾಗಿರುವುದರಿಂದಾಗಿ ತಮಿಳುನಾಡಿಗೆ ನೀರು ಹರಿಸುವುದನ್ನು ನಿಲ್ಲಿಸಲು ಆದೇಶ ನೀಡುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿಗೆ ಮನವಿ ಮಾಡುವುದಾಗಿ ಜಲ ಸಂಪನ್ಮೂಲ ಸಚಿವ ಚೆಲುವರಾಯ ಸ್ವಾಮಿ ಹೇಳಿದ್ದಾರೆ. ದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ಜಲಾನಯನ ಪ್ರದೇಶದಲ್ಲಿನ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದರಿಂದಾಗಿ ನೀರಿನ ಹರಿವನ್ನು 3 ಸಾವಿರ ಕ್ಯೂಸೆಕ್‌ಗೆ ಸಿಡಬ್ಲ್ಯೂಆರ್‌ಸಿ ಕಡಿತ ಮಾಡಿದೆ ಎಂದು ಹೇಳಿದರು.

ನಮಗೆ ಸಮಸ್ಯೆಗಳಿದ್ದರೂ, ಸುಪ್ರೀಂಕೋರ್ಟ್ ಮತ್ತು ಸಿಡಬ್ಲ್ಯೂಆರ್‌ಸಿ ಆದೇಶ ಪಾಲನೆ ಮಾಡಿದ್ದೇವೆ. ಈಗ ನೀರಿನ ಒಳ ಹರಿವು ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಡಲು ಕಷ್ಟಸಾಧ್ಯವಾಗುತ್ತದೆ. ಹೀಗಾಗಿ ತಮ ಆದೇಶವನ್ನು ಪುನರ್ ಪರಿಶೀಲಿಸುವಂತೆ ಸಿಡಬ್ಲ್ಯೂಆರ್‌ಸಿಗೆ ಮೇಲನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ತಮಿಳುನಾಡಿಗೆ ಕಾವೇರಿ ನೀರಿ ಬಿಡುವ ವಿಚಾರವಾಗಿ ಸಂಕಷ್ಟ ಸೂತ್ರ ಪಾಲನೆಯಾಗಬೇಕು. ನಮಗೆ ನೀರಿಲ್ಲದಿದ್ದಾಗ ತಮಿಳುನಾಡಿಗೆ ನೀರು ಹರಿಸಲು ಹೇಗೆ ಸಾಧ್ಯ? ಈ ಕುರಿತಂತೆ ಒಟ್ಟಾರೆ ಪರಿಶೀಲನೆ ನಡೆಸಲು ಮನವಿ ಸಲ್ಲಿಸುತ್ತಿದ್ದೇವೆ ಎಂದು ಹೇಳಿದರು.

# ಬಿಎಂಟಿಸಿ ಬಸ್‌ನಲ್ಲಿ ಮೊಬೈಲ್ ಸ್ಪೀಕರ್ ಹಾಕಿದರೆ ಕೆಳಗಿಳಿಸುವುದು ಗ್ಯಾರಂಟಿ; ಎಚ್ಚರಿಕೆ




**ಬೆಂಗಳೂರು:** ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರು ತಮ ಮೊಬೈಲ್ ಸ್ಪೀಕರ್‌ನಲ್ಲಿ ಜೋರಾಗಿ ಹಾಡುಗಳನ್ನು ಕೇಳುವುದಾಗಲೀ ಅಥವಾ ರೀಲ್ ನೋಡುತ್ತಾ ಸಹಪ್ರಯಾಣಿಕರಿಗೆ ತೊಂದರೆ ಕೊಟ್ಟರೆ ತಕ್ಷಣ ಅಂತಹ ಪ್ರಯಾಣಿಕರನ್ನು ಬಸ್ ನಿಂದ ಕೆಳಗೆ ಇಳಿಸಲಾಗುತ್ತದೆ ಎಚ್ಚರ. ಬಿಎಂಟಿಸಿ ಬಸ್‌ಗಳಲ್ಲಿ ಇತ್ತೀಚೆಗೆ ಜೋರಾಗಿ ಹಾಡು ಕೇಳುವುದು, ರೀಲ್ಸ್ ನೋಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದನ್ನು ತಡೆಯುವ ಉದ್ದೇಶದಿಂದ ಬಿಎಂಟಿಸಿ ಮುಂದಾಗಿದೆ.

ಬಸ್‌ನಲ್ಲಿ ಪ್ರಯಾಣಿಕರು ಮೊಬೈಲ್‌ನಲ್ಲಿ ಜೋರಾಗಿ ಶಬ್ದ ಮಾಡಿದರೆ ನಿರ್ವಹಕರು ಅಥವಾ ಚಾಲಕರು ಮೊದಲು ಬಂದ್ ಮಾಡಲು ಹೇಳುತ್ತಾರೆ. ಮಾತು ಕೇಳದಿದ್ದರೆ ಅಂತಹ ಪ್ರಯಾಣಿಕರನ್ನು ಬಸ್‌ನಿಂದ ಕೆಳಗೆ ಇಳಿಸುವಂತೆ ಬಿಎಂಟಿಸಿ ಸೂಚಿಸಿದೆ.

ಲೌಡ್‌ಸ್ಪೀಕರ್ ಹಾಕುವುದನ್ನು ಸಹಪ್ರಯಾಣಿಕರು ಯಾರಾದರೂ ಪ್ರಶ್ನಿಸಿದರೆ ಉಳಿದವರು ಅವರಿಗೆ ಧ್ವನಿಗೂಡಿಸಬೇಕು.ಅದುಬಿಟ್ಟು ಒಬ್ಬರೇ ಅದನ್ನು ಖಂಡಿಸಿದರೆ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಬಸ್‌ನಲ್ಲಿ ಮೊಬೈಲ್‌ನಿಂದ ಇತರರಿಗೆ ಕಿರಿಕಿರಿಯಾದರೆ ಅದನ್ನು ಎಲ್ಲರೂ ಪ್ರಶ್ನಿಸಿದರೆ ತಡೆಗಟ್ಟಬಹುದು.

ಈಗಾಗಲೇ ಬಿಎಂಟಿಸಿ ಬಸ್‌ಗಳಲ್ಲಿ ಈ ಬಗ್ಗೆ ಸೂಚನಾ ಫಲಕಗಳನ್ನು ಹಾಕಿದ್ದರೂ ಸಹ ಪ್ರಯಾಣಿಕರು ಕ್ಯಾರೆ ಅನ್ನುತ್ತಿಲ್ಲ. ಒಬ್ಬೊಬ್ಬರಂತು ಮೊಬೈಲ್‌ನಲ್ಲಿ ಜೋರಾಗಿ ಮಾತನಾಡುವುದು ಬಸ್‌ನಲ್ಲಿದ್ದವರಿಗೆಲ್ಲಾ ಕೇಳಿಸುತದೆ. ಇದು ಇನ್ನೂ ಕಿರಿಕಿರಿಯೆನಿಸುತ್ತದೆ. ಈ ಬಗ್ಗೆ ಪ್ರಶ್ನಿಸಿದರೆ ಬಸ್‌ನೊಳಗೆ ಜಗಳವೇ ನಡೆದು ಹೊಡೆದಾಟವಾಗಿರುವುದನ್ನೂ ಸಹ ನಾವು ನೋಡಿದ್ದೇವೆ. ಹಾಗಾಗಿ ಇತರೆ ಪ್ರಯಾಣಿಕರಿಗೆ ತೊಂದರೆಯಾಗದಂತೆ ಮೊಬೈಲ್ ಬಳಸುವುದು ಒಳ್ಳೆಯದು.

ಮೊಬೈಲ್ ಸ್ಪೀಕರ್ ಬಳಕೆಯಿಂದಾಗಿ ಬಸ್ ಚಾಲಕರು, ನಿರ್ವಹಕರು ಹಾಗೂ ಸಹಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಹಾಗಾಗಿ ಬಿಎಂಟಿಸಿ ಈ ರೀತಿಯ ನಿರ್ಧಾರಕ್ಕೆ ಬಂದಿದೆ.ಇನ್ನು ಮುಂದೆ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುವವರು ಈ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ.

# ದಸರಾ ರಜೆ ವೇಳೆ ಪರೀಕ್ಷೆ ನಿಗದಿ ವಿರೋಧಿಸಿ ಮಂಗಳೂರಿನ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ



**ಮಂಗಳೂರು:** ದಸರಾ ಹಬ್ಬದ ರಜೆಯ ಅವಧಿಯಲ್ಲಿ ಸೆಮಿಸ್ಟರ್ ಪರೀಕ್ಷೆಗಳನ್ನು ನಿಗದಿಪಡಿಸಿರುವ ಕಾಲೇಜು ಆಡಳಿತ ಮಂಡಳಿಯ ನಿರ್ಧಾರವನ್ನು ವಿರೋಧಿಸಿ, ಮಂಗಳೂರಿನ ಸೇಂಟ್ ಆಗ್ನೆಸ್ ಕಾಲೇಜಿನ ಪದವಿ ವಿದ್ಯಾರ್ಥಿಗಳು ಇಂದು ಪ್ರತಿಭಟನೆ ನಡೆಸಿದರು.

ಪರೀಕ್ಷೆಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳು ಕಾಲೇಜಿನ ಪ್ರವೇಶ ದ್ವಾರದ ಹೊರಗೆ ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.ಕಾಲೇಜು ಆಡಳಿತ ಮಂಡಳಿಯು ಅಕ್ಟೋಬರ್ 12ರಿಂದ 28ರವರೆಗೆ ಸೆಮಿಸ್ಟರ್ ಪರೀಕ್ಷೆಗಳನ್ನು ನಿಗದಿಪಡಿಸಿದೆ. ಆದರೆ, ಈ ಅವಧಿಯು ದಸರಾ ಹಬ್ಬದ ಸಂಭ್ರಮಾಚರಣೆಗೆ ಅಡ್ಡಿಯಾಗಲಿದೆ ಎಂದು ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಾದೇಶಿಕ ಸಂಪ್ರದಾಯಗಳು ಮತ್ತು ಹಬ್ಬದ ಆಚರಣೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಪರೀಕ್ಷೆಗಳ ವೇಳಾಪಟ್ಟಿಯನ್ನು ಬದಲಾಯಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಬೆಂಬಲದೊಂದಿಗೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಸಮಸ್ಯೆಯಲ್ಲಿ ತಕ್ಷಣ ಮಧ್ಯಪ್ರವೇಶಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೂ ಮನವಿ ಸಲ್ಲಿಸಿದ್ದಾರೆ. ಪ್ರತಿಭಟನಾಕಾರರನ್ನು ಸಮಾಧಾನಪಡಿಸಿ ಚದುರಿಸಲು ಪೊಲೀಸರು ಪ್ರಯತ್ನಿಸಿದರೂ ಕಾಲೇಜಿನ ಹೊರಗೆ ಪ್ರತಿಭಟನೆ ಮುಂದುವರಿಯಿತು. ಇದೇ ವೇಳೆ, ಪರೀಕ್ಷೆ ಬರೆಯಲು ನಿರ್ಧರಿಸಿದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ನಡೆಯುತ್ತಿದ್ದವು.

ಪರೀಕ್ಷೆ ಬಹಿಷ್ಕರಿಸಿದರೆ ಶೈಕ್ಷಣಿಕವಾಗಿ ತೊಂದರೆ ಅಥವಾ ದಂಡಾತಕ ಕ್ರಮ ಎದುರಾಗಬಹುದೇ ಎಂಬ ಆತಂಕ ಪ್ರತಿಭಟನಾನಿರತ ವಿದ್ಯಾರ್ಥಿಗಳಲ್ಲಿ ಮೂಡಿದೆ. ದಸರಾ ರಜೆ ವೇಳೆ ಪರೀಕ್ಷೆ ನಡೆಸುವ ನಿರ್ಧಾರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಮತ್ತು ಕಾಲೇಜು ಆಡಳಿತ ಮಂಡಳಿಯ ನಡುವಿನ ವಿವಾದ ಮುಂದುವರಿದಿದ್ದು, ಪರೀಕ್ಷಾ ವೇಳಾಪಟ್ಟಿಯಲ್ಲಿ ಬದಲಾವಣೆ ಆಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

# ಹುದ್ದೆ ಬಿಡುವವರೆಗೂ ನಿದ್ದೆ ಮಾಡದಂತೆ ಮಾಡುತ್ತೇವೆ: ಜ್ಞಾನೇಶ್ ಕುಮಾರ್‌ಗೆ ರಾಹುಲ್ ಗಾಂಧಿ ಎಚ್ಚರಿಕೆ



**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ಕೆಳಗಿಳಿಯುವಂತೆ ಮಾಡುತ್ತೇವೆ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರತಿಜ್ಞೆ ಮಾಡಿದರು. ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಅವರು, ಮುಖ್ಯ ಚುನಾವಣೆ ಆಯುಕ್ತರನ್ನು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ರಕ್ಷಿಸುತ್ತಿದೆ. ಚುನಾವಣಾ ಮುಖ್ಯಸ್ಥರಿಗೆ ಈಗ ನಿದ್ದೆ ಬರುತ್ತಿಲ್ಲ ಎಂಬುದು ನಮಗೆ ಗೊತ್ತಿದೆ ಎಂದರು.

ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ನಿಮಗೆ ನಿದ್ದೆ ಬರುತ್ತಿಲ್ಲ ಎಂಬುದು ನಮಗೆ ಗೊತ್ತು. ನೀವು ಹುದ್ದೆ ಬಿಡುವಂತೆ ನಾವು ಮಾಡುತ್ತೇವೆ. ಚುನಾವಣಾ ಅಕ್ರಮಗಳ ಆರೋಪದ ವಿರುದ್ಧದ ಪ್ರತಿಭಟನೆಗಳನ್ನು ಹತ್ತಿಕ್ಕಲು 30,000ದಷ್ಟು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿ ದೆಹಲಿಯನ್ನು ಕೋಟೆಯನ್ನಾಗಿ ಕೇಂದ್ರ ಸರ್ಕಾರ ಮಾಡಿದೆ ಎಂದು ಆರೋಪಿಸಿದರು.

ಕಳೆದ 10–12 ವರ್ಷಗಳಿಂದ ಬೆಳೆಯುತ್ತಿದ್ದ ಪ್ರತಿರೋಧವು ಈಗ ಸಾರ್ವಜನಿಕ ಚಳುವಳಿಯಾಗಿ ರೂಪುಗೊಳ್ಳುತ್ತಿದೆ ಎಂದ ಅವರು, ನಮ್ಮ ತಂತ್ರವೇ ಬೇರೆ. ಅಲ್ಲಿ ಪೊಲೀಸ್ ವಲಯ ಇರಬೇಕೆಂದು ನಾವು ಬಯಸುತ್ತೇವೆ. ಪ್ರಧಾನಿ ಮೋದಿ ಅವರು ಜ್ಞಾನೇಶ್ ಕುಮಾರ್ ಅವರನ್ನು ರಕ್ಷಿಸುತ್ತಿದ್ದಾರೆ ಎಂಬುದು ದೇಶಕ್ಕೆ ತಿಳಿಯಬೇಕು ಎಂದು ನಾವು ಬಯಸುತ್ತೇವೆ ಎಂದರು.

ಸರ್ಕಾರದೊಳಗಿನ ಜನರು ವಿರೋಧ ಪಕ್ಷದೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಹೇಳಿದ ರಾಹುಲ್ ಗಾಂಧಿ, 200 ಸರ್ಕಾರಿ ಅಧಿಕಾರಿಗಳು ತಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ. ನಮ್ಮ ಬಳಿ ಪ್ರಧಾನಿ ನರೇಂದ್ರ ಮೋದಿ ಅವರ 'ಜನ್ಮಪತ್ರಿಕೆ' ಇದೆ. ಅವರಿಗೆ ಅದು ಗೊತ್ತು, ನನಗೂ ಅದು ಗೊತ್ತು ಎಂದು ಹೇಳಿದರು.

ಜ್ಞಾನೇಶ್ ಕುಮಾರ್ ಅವರಿಂದ ತಮಗೆ ಸಂದೇಶಗಳು ಬಂದಿದ್ದವು. ಅವರಿಗೆ ಸಾಕ್ಷಿದಾರರಾಗಿ ಬದಲಾಗುವಂತೆ ಕೇಳಿಕೊಂಡಿದ್ದೆ ಎಂದ ರಾಹುಲ್ ಗಾಂಧಿ ಆ ಸಂದೇಶಗಳಲ್ಲಿದ್ದ ವಿಷಯಗಳೇನು ಅಥವಾ ಜ್ಞಾನೇಶ್ ಕುಮಾರ್ ಯಾವ ರೀತಿಯ ಮಾಹಿತಿಯನ್ನು ನೀಡಿದರು ಎಂಬುದನ್ನು ವಿವರಿಸಲಿಲ್ಲ.

ಜಂತರ್ ಮಂತರ್ ತಲುಪಲು ಪ್ರಯತ್ನಿಸುತ್ತಿದ್ದ ಪ್ರತಿಭಟನಾಕಾರರ ಮೇಲೆ ವಿಧಿಸಲಾದ ನಿರ್ಬಂಧಗಳನ್ನು ಪ್ರಶ್ನಿಸಿದ ಅವರು, ಜನರ ಚಳುವಳಿಯನ್ನು ತಡೆಯಲಾಗುತ್ತಿದೆ. ದೆಹಲಿ ಈಗ ಒಂದು ಕೋಟೆಯಂತಾಗಿದೆ. ಯುವ ಪ್ರತಿಭಟನಾಕಾರರ ವಿರುದ್ಧ ಬಲಪ್ರಯೋಗ ಮಾಡುವಂತೆ ತಮ್ಮನ್ನು ಏಕೆ ಕೇಳಲಾಗುತ್ತಿದೆ ಎಂದು ಪೊಲೀಸ್ ಸಿಬ್ಬಂದಿ ಪ್ರಶ್ನಿಸುತ್ತಿದ್ದಾರೆ ಎಂದು ಹೇಳಿದರು.

# ಡಾ.ಸುಶೀಲಮ್ಮ ಇಡೀ ಹೆಬ್ಬಾಳ ಕ್ಷೇತ್ರಕ್ಕೆ ಮಹಾತಾಯಿ ಇದ್ದಂತೆ: ಸುಮಂಗಲಿ ಸೇವಾಶ್ರಮ ನಾಡಿನ ಹೆಮ್ಮೆ:ಬೈರತಿ ಸುರೇಶ್



**ಬೆಂಗಳೂರು:** ಹೆಬ್ಬಾಳದಲ್ಲಿ ಅಬಲೆಯರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಸುಮಂಗಲಿ ಸೇವಾಶ್ರಮ ನಮ್ಮ ನಾಡಿನ ಹೆಮ್ಮೆಯ ಸಂಸ್ಥೆಯಾಗಿದೆ ಎಂದು ಹೆಬ್ಬಾಳ ಕ್ಷೇತ್ರದ ಶಾಸಕರೂ ಆಗಿರುವ ಸಾರಿಗೆ ಸಚಿವ ಬೈರತಿ ಸುರೇಶ್ ಹೇಳಿದ್ದಾರೆ.

ಹೆಬ್ಬಾಳದಲ್ಲಿರುವ ಸುಮಂಗಲಿ ಸೇವಾ ಆಶ್ರಮದಲ್ಲಿ ಏರ್ಪಡಿಸಿದ್ದ ಆಶ್ರಮದ ಸಲಹೆಗಾರರಾದ ಎನ್.ಶ್ರೀದೇವಿ ಅವರು ರಚಿಸಿರುವ ವಿಸ್ಪರ್ಸ್ ಆಫ್ ವಿಸ್ಡಮ್ ಮತ್ತು ಟಾಯ್ಸ್ & ಗೇಮ್ಸ್‌ಎಂಬ ಎರಡು ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಆರ್ಥಿಕವಾಗಿ ಹಿಂದುಳಿದವರು, ಅನಾಥ ಹೆಣ್ಣು ಮಕ್ಕಳನ್ನು ಪೋಷಣೆ ಮಾಡುವ ಮೂಲಕ ಅವರಿಗೆ ಪುನರ್ಜನ್ಮ ನೀಡುವ ಮಹತ್ಕಾರ್ಯ ವನ್ನು ಪದ್ಮಶ್ರೀ ಪುರಸ್ಕೃತರಾದ ಡಾ.ಎಸ್.ಜಿ.ಸುಶೀಲಮ್ಮ ನೇತೃತ್ವದ ಆಶ್ರಮ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಸುಶೀಲಮ್ಮ ಮತ್ತು ಅವರ ತಂಡ ನಡೆಸುತ್ತಿರುವ ಈ ಕಾರ್ಯದಿಂದಾಗಿ ಸಾವಿರಾರು ಹೆಣ್ಣು ಮಕ್ಕಳು ಇಂದು ಸಮಾಜದಲ್ಲಿ ತಲೆ ಎತ್ತಿ ನಡೆದಾಡಿ ಸ್ವಾವಲಂಬಿ ಜೀವನ ಸಾಗಿಸುವಂತಾಗಿದೆ. ಈ ಕಾರಣದಿಂದಲೇ ಸುಶೀಲಮ್ಮ ಅವರು ಕೇವಲ ಆಶ್ರಮ ವಾಸಿಗಳಿಗೆ ತಾಯಿಯಲ್ಲ, ಇಡೀ ಹೆಬ್ಬಾಳ ಕ್ಷೇತ್ರದ ಮಹಾತಾಯಿಯಾಗಿದ್ದಾರೆ ಎಂದು ಬಣ್ಣಿಸಿದರು.

ಈ ಸೇವಾಶ್ರಮ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ಇಲ್ಲಿ ಆಶ್ರಯ ಪಡೆಯುತ್ತಿರುವವರ ಸಂಖ್ಯೆಯೂ ಅಧಿಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆಶ್ರಮಕ್ಕೆ ಅಗತ್ಯವಿರುವ ಎಲ್ಲಾ ನೆರವನ್ನು ನೀಡಲು ನಮ್ಮ ಸರ್ಕಾರ ಮತ್ತು ಶಾಸಕನಾಗಿ ನಾನು ಬದ್ಧವಾಗಿದ್ದೇವೆ ಎಂದು ಸಚಿವರು ಭರವಸೆ ನೀಡಿದರು.

ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಶಿವರಾತ್ರೀ ದೇಶೀಕೇಂದ್ರ ಸ್ವಾಮೀಜಿ, ಸಾರಿಗೆ ಸಚಿವ ಬೈರತಿ ಸುರೇಶ್, ಮಾಜಿ ಸಚಿವೆ ರಾಣಿ ಸತೀಶ್, ಡಾ.ಸಿ.ಸೋಮಶೇಖರ್, ಡಾ.ಸುಶೀಲಮ್ಮ ಮತ್ತು ಎನ್. ಶ್ರೀದೇವಿ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ವ್ಯಕ್ತಿತ್ವ, ನಡೆ ನುಡಿಯ ಬಗ್ಗೆ ಸಾರಿಗೆ ಸಚಿವ ಬೈರತಿ ಸುರೇಶ್ ಮುಕ್ತ ಮನಸಿನಿಂದ ಕೊಂಡಾಡಿದರು. ನಮ್ಮೆಲ್ಲರಿಗೂ ಹಿರಿಯರಾಗಿರುವ ರಾಜ್ಯಪಾಲರು ಲೋಕಭವನಕ್ಕೆ ಹೋಗುವ ಯಾವುದೇ ಪಕ್ಷದ ಮುಖಂಡರಾಗಲೀ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುತ್ತಾರೆ. ಅವರು ಯಾವುದೇ ರೀತಿಯ ಬೇಧಭಾವ ಮಾಡುವುದಿಲ್ಲ ಎಂದು ಹೊಗಳಿದರು.

ಅವರು ನೀಡುವ ಆತಿಥ್ಯವನ್ನು ಸ್ವೀಕರಿಸುವುದೇ ಒಂದು ರೀತಿಯಲ್ಲಿ ಖುಷಿಯನ್ನು ನೀಡುತ್ತದೆ. ಗೆಹ್ಲೋಟ್ ಸಾಹೇಬ್ರು ರಾಜ್ಯಕ್ಕೆ ಆಗಮಿಸಿದ್ದ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಿಗೆ ಇವರ ಹೆಸರು ಬೈರತಿ ಸುರೇಶ್. ಮಂತ್ರಿಯಾಗಿದ್ದಾರೆ, ನಮ್ಮ ಹುಡುಗನ ರೀತಿ ಎಂದು ಪರಿಚಯ ಮಾಡಿ ಕೊಡುವ ಮೂಲಕ ತಮ್ಮ ಮುತ್ಸದ್ಧಿತನವನ್ನು ತೋರಿರುವುದು ಅತ್ಯಂತ ಸಂತೋಷದ ಸಂಗತಿ ಯಾಗಿದೆ ಎಂದರು.

ಗೆಹ್ಲೋಟ್ ಅವರು ನಮ್ಮ ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ರಾಜ್ಯಪಾಲರಾಗಿ ಅಧಿಕಾರ ದಲ್ಲಿದ್ದಾರೆ. ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಇಂತಹ ಹಿರಿಯ ಮುತ್ಸದ್ಧಿ ಇನ್ನೂ 10 ವರ್ಷ ಗಳ ಕಾಲ ನಮ್ಮ ರಾಜ್ಯದ ಸೇವೆನ್ನು ಮಾಡಲಿ ಎಂಬುದಾಗಿದೆ. ಏಕೆಂದರೆ, ಅವರಂತಹ ಸ್ನೇಹ ಮಯಿ ರಾಜ್ಯಪಾಲರು ಅತ್ಯಂತ ವಿರಳ ಎಂದು ಬೈರತಿ ಸುರೇಶ್ ಬಣ್ಣಿಸಿದರು.

# ಆನ್ಲೈನ್ ಮುಖಾಂತರ ರಸಮೇವು ಕಳುಹಿಸುವುದಾಗಿ ಹೇಳಿ 1.95 ಲಕ್ಷ ರೂ.ವಂಚನೆ

**ಕಲಬುರಗಿ:** ಆನ್ಲೈನ್ ಮುಖಾಂತರ ರಸಮೇವು ಕಳುಹಿಸುವುದಾಗಿ ಹೈನುಗಾರಿಕೆ ವ್ಯಾಪಾರ ಮಾಡುತ್ತಿರುವ ವ್ಯಕ್ತಿಯೊಬ್ಬರಿಗೆ 1,95000 ರೂ.ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಕಮಲಾಪುರದಲ್ಲಿ ಹೈನುಗಾರಿಕೆ ವ್ಯಾಪಾರ ಮಾಡುತ್ತಿರುವ ಕಲಬುರಗಿ ಜಗತ್ ಬಡಾವಣೆ ನಿವಾಸಿ ರಾಜಶೇಖರ್ ಸುಗೂರ್ ಎಂಬುವವರೆ ವಂಚನೆಗೆ ಒಳಗಾಗಿದ್ದು, ಅವರು ಈ ಸಂಬಂಧ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಕಮಲಾಪುರದಲ್ಲಿ ಹೈನುಗಾರಿಕೆ ವ್ಯಾಪಾರ ಮಾಡುತ್ತಿರುವ ರಾಜಶೇಖರ್ ಸುಗೂರ್ ಅವರು ಆನ್ಲೈನ್ ಮುಖಾಂತರ ದನಗಳ ಮೇವು (ರಸಮೇವು) ಖರೀದಿಸಲೆಂದು ಸಂಬಂಧಿ ಹಾಗೂ ಪಶು ವೈದ್ಯಾಧಿಕಾರಿ ಡಾ.ವೈಜನಾಥ ಮಮ್ಮಾಣಿ ಅವರೊಂದಿಗೆ ಚರ್ಚೆ ನಡೆಸಿ ಅವರ ಮೊಬೈಲ್‌ನಲ್ಲಿಯೇ ಆನ್ಲೈನ್‌ನಲ್ಲಿ ಸರ್ಚ್ ಮಾಡಿದ್ದು, ವೆಬ್‌ಸೈಟ್ ಒಂದು ಓಪನ್ ಆಗಿದೆ. ಆಗ ಉತ್ತರ ಪ್ರದೇಶದ ಗಾಜಿಯಾಬಾದ್‌ನ ಮನೀಷ್ ಎಂಬಾತ ರಸಮೇವು ಬಗ್ಗೆ ಮಾಹಿತಿ ನೀಡಿ ಪ್ರತಿ ಕೆಜಿಗೆ 5 ರೂಪಾಯಿಯಂತೆ ಟ್ರಾನ್ಸಪೋರ್ಟ್ ಚಾರ್ಜ್ ಸೇರಿ ಪ್ರತಿ ಕೆಜಿಗೆ 6.5 ರೂಪಾಯಿ ಹಣ ನಿಗದಿ ಪಡಿಸಿದ್ದಾನೆ. ಅದಕ್ಕೆ ಇವರು ಒಪ್ಪಿಕೊಂಡು 30,000 ಕೆಜಿ (30 ಟನ್) ರಸಮೇವು ಖರೀದಿಸಲು ಒಪ್ಪಿದ್ದಾರೆ.

# ರಾಜಸ್ಥಾನದಲ್ಲಿ ಭೀಕರ ಘರ್ಷಣೆ: ಮಾಜಿ ಬಿಜೆಪಿ ಶಾಸಕನನ್ನೇ ಹೊಡೆದು ಕೊಂದ ಗ್ರಾಮಸ್ಥರು



**ಜೈಪುರ:** ಗಣಿಗಾರಿಕೆ ಗುತ್ತಿಗೆ ಮತ್ತು ಕ್ರಷರ್ ಘಟಕದ ವಿಚಾರವಾಗಿ ಗ್ರಾಮಸ್ಥರೊಂದಿಗೆ ನಡೆದ ಘರ್ಷಣೆಯಲ್ಲಿ ರಾಜಸ್ಥಾನದ ಮಾಜಿ ಬಿಜೆಪಿ ಶಾಸಕ ಅಟರ್ ಸಿಂಗ್ ಭದಾನಾ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ರಾಜಸ್ತಾನದ ಭರತ್‌ಪುರ ಜಿಲ್ಲೆಯ ಭೋಂಡಾ ಗ್ರಾಮದಲ್ಲಿ ತಡರಾತ್ರಿ ಈ ಘಟನೆ ನಡೆದಿದ್ದು, ಹಲ್ಲೆಯಲ್ಲಿ ಅವರ ಅಂಗರಕ್ಷಕ ಗಗನ್ ಶರ್ಮಾ ಕೂಡ ಗಾಯಗೊಂಡಿದ್ದಾರೆ.

ಮೂಲಗಳ ಪ್ರಕಾರ ಭೋಂಡಾ ಗ್ರಾಮದ ಸಮೀಪದ ತಮ್ಮ ಗಣಿಗಾರಿಕೆ ಗುತ್ತಿಗೆ ಪ್ರದೇಶಕ್ಕೆ ಭದಾನಾ ಅವರು ತೆರಳಿದ್ದಾಗ ನೂರಾರು ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿ, ಅವರ ಮೇಲೆ ಲಾಠಿಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ವರದಿಯಾಗಿದೆ.

ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ವೀರ್ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಜೈಪುರಕ್ಕೆ ಕಳುಹಿಸಿದರು. ಆದರೆ, ಜೈಪುರದ ಸವಾಯಿ ಮಾನ್ ಸಿಂಗ್ ಆಸ್ಪತ್ರೆಯಲ್ಲಿ ಭಾನುವಾರ ಮಧ್ಯರಾತ್ರಿ ವೈದ್ಯರು ಅವರು ಮೃತಪಟ್ಟಿರುವುದಾಗಿ ಘೋಷಿಸಿದರು. ಗಾಯಗೊಂಡಿದ್ದ ಅಂಗರಕ್ಷಕ ಗಗನ್ ಶರ್ಮಾ ಅವರನ್ನು ಭರತ್‌ಪುರದ ರಾಜ್ ಬಹದ್ದೂರ್ ಸ್ಮಾರಕ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಹರಿಯಾಣ ಮೂಲದ ಅಟರ್ ಸಿಂಗ್ ಭದಾನಾ ಅವರು ಭೋಂಡಾ ಗ್ರಾಮದ ಬೆಟ್ಟಗಳ ಸಮೀಪ ಗಣಿಗಾರಿಕೆ ಗುತ್ತಿಗೆ ಮತ್ತು ಕ್ರಷರ್ ಘಟಕ ಹೊಂದಿದ್ದರು. ಗಣಿಗಾರಿಕೆ ಗುತ್ತಿಗೆಯು ಅವರ ಪತ್ನಿ ಕಮಲೇಶ್ ಭದಾನಾ ಅವರ ಹೆಸರಿನಲ್ಲಿತ್ತು ಎಂದು ವರದಿಯಾಗಿದೆ.

ಭೋಂಡಾ ಮತ್ತು ರಾಯ್‌ಪುರ ಗ್ರಾಮಗಳ ನಿವಾಸಿಗಳು ಈ ಗಣಿಗಾರಿಕೆ ಚಟುವಟಿಕೆಗಳು ಹಾಗೂ ಕ್ರಷರ್ ಘಟಕದ ವಿರುದ್ಧ ಕಳೆದ ಎರಡು ವರ್ಷಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ಹಲವು ಬಾರಿ ಧರಣಿ ನಡೆಸಿದ್ದಲ್ಲದೆ, ಗಣಿಗಾರಿಕೆ ಪ್ರದೇಶಕ್ಕೆ ತೆರಳುವ ರಸ್ತೆಯನ್ನೂ ತಡೆದು ಆಕ್ರೋಶ ವ್ಯಕ್ತಪಡಿಸಿದ್ದರು.

ಗಣಿಗಾರಿಕೆ ವಾಹನಗಳ ಸಂಚಾರಕ್ಕಾಗಿ ಗ್ರಾಮ ಪಂಚಾಯಿತಿಗೆ ಸೇರಿದ ಗೋಮಾಳ ಭೂಮಿಯನ್ನು ಭದಾನಾ ಬಳಸಿಕೊಳ್ಳುತ್ತಿದ್ದಾರೆ ಎಂಬುದು ಪ್ರತಿಭಟನಾನಿರತ ಗ್ರಾಮಸ್ಥರ ಆರೋಪವಾಗಿದೆ. ಈ ಹಿನ್ನೆಲೆಯಲ್ಲಿ ಗಣಿಗಾರಿಕೆ ಚಟುವಟಿಕೆಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದರು ಎಂದು ವರದಿಯಾಗಿದೆ.

ಎರಡು ವರ್ಷಗಳಿಂದ ಗ್ರಾಮಸ್ಥರ ವಿರೋಧದಿಂದಾಗಿ ಕ್ರಷರ್ ಘಟಕದ ಕಾರ್ಯಾಚರಣೆ ಸ್ಥಗಿತಗೊಂಡಿತ್ತು ಎನ್ನಲಾಗಿದೆ. ಈ ನಡುವೆ, ನ್ಯಾಯಾಲಯದಿಂದ ಕಾರ್ಯಾಚರಣೆ ನಡೆಸಲು ಅನುಮತಿ ಪಡೆದ ಬಳಿಕ ಭದಾನಾ ಅವರು ಭಾನುವಾರ ಘಟಕವನ್ನು ಪುನರಾರಂಭಿಸಿದ್ದರು.

ಆಡಳಿತದ ಬೆಂಬಲದೊಂದಿಗೆ ಘಟಕವನ್ನು ಮತ್ತೆ ಆರಂಭಿಸಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿ ದಾಳಿ ನಡೆಸಿದ್ದಾರೆ ಎಂದು ವರದಿಯಾಗಿದೆ. ಈ ಘರ್ಷಣೆಯೇ ಮಾಜಿ ಶಾಸಕನ ಸಾವಿಗೆ ಕಾರಣವಾಗಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

## ಜಿಬೌಟಿ ಕರಾವಳಿಯಲ್ಲಿ ದುರಂತ

# ಜನದಟ್ಟಣೆಯಿಂದ ತುಂಬಿದ್ದ ಹಡಗು ಮಗುಚಿ ಹದಿನೈದು ಮಕ್ಕಳು ಸೇರಿದಂತೆ 139 ಮಂದಿ ಸಾವು, 84 ಜನ ನಾಪತ್ತೆ



ಯೆಮೆನ್‌ನತ್ತ 300ಕ್ಕೂ ಹೆಚ್ಚು ಜನರನ್ನು ಹೊತ್ತೊಯ್ಯುತ್ತಿದ್ದ ಹಡಗು ಜಿಬೌಟಿ ಕರಾವಳಿಯಲ್ಲಿ ಮಗುಚಿ ಬಿದ್ದ ಪರಿಣಾಮ, 15 ಮಕ್ಕಳು ಸೇರಿದಂತೆ ಕನಿಷ್ಠ 139 ಮಂದಿ ಮೃತಪಟ್ಟಿದ್ದು, 84 ಜನ ನಾಪತ್ತೆಯಾಗಿದ್ದಾರೆ ಎಂದು ವಿಶ್ವಸಂಸ್ಥೆಯ ವಲಸೆ ಏಜೆನ್ಸಿ ತಿಳಿಸಿದೆ ಎಂದು ವರದಿಯಾಗಿದೆ.

ಅಂತರಾಷ್ಟ್ರೀಯ ವಲಸೆ ಏಜೆನ್ಸಿ ಪ್ರಕಾರ, ಅಕ್ಟೋಬರ್ 8–9ರ ರಾತ್ರಿ ಏಡನ್ ಕೊಲ್ಲಿಯಲ್ಲಿರುವ ಜಿಬೌಟಿಯ ಪೂರ್ವ ಕರಾವಳಿಯ ಗುಹೆರೆ ಬಳಿ ಈ ಘಟನೆ ನಡೆದಿದೆ. ಹಡಗು ಮುಳುಗುವಾಗ ಅದರಲ್ಲಿ 305 ಮಂದಿ ಪ್ರಯಾಣಿಸುತ್ತಿದ್ದರು ಮತ್ತು ಅವರಲ್ಲಿ ಬಹುಪಾಲು ಜನರು ಇಥಿಯೋಪಿಯನ್ನರಾಗಿದ್ದರು. 84 ಜನ ಬದುಕುಳಿದಿದ್ದಾರೆ ಎಂದು ತಿಳಿಸಿದೆ.

ಆರಂಭದಲ್ಲಿ 109 ಸಾವುಗಳು ಮತ್ತು 116 ಜನರು ಕಾಣೆಯಾಗಿದ್ದಾರೆ ಎಂದು ಏಜೆನ್ಸಿ ವರದಿ ಮಾಡಿತ್ತು. ಆದರೆ ಹೆಚ್ಚಿನ ಶವಗಳು ಪತ್ತೆಯಾದ ಬಳಿಕ ಸಾವಿನ ಸಂಖ್ಯೆ 139ಕ್ಕೆ ಏರಿಕೆಯಾಗಿದ್ದು, 84 ಜನ ಕಾಣೆಯಾಗಿದ್ದಾರೆ ಎಂದು ಹೇಳಿದೆ.

ಈ ಕುರಿತು ಮಾಹಿತಿ ನೀಡಿರುವ ಜಿಬೌಟಿಯಲ್ಲಿರುವ ಐಓಎಂನ ಕಾರ್ಯಾಚರಣೆಯ ಮುಖ್ಯಸ್ಥ ಅಲೆಕ್ಸಾಂಡ್ರೆ ಕೊಯ್ನಾಕ್, ದೃಢಪಟ್ಟಿರುವ ಮೃತರ ಸಂಖ್ಯೆಯು ಜಿಬೌಟಿಯಲ್ಲಿ ಅಧಿಕಾರಿಗಳಿಂದ ಅಂತ್ಯಸಂಸ್ಕಾರಕ್ಕೊಳಗಾದವರನ್ನು ಮಾತ್ರ ಒಳಗೊಂಡಿದೆ, ಹೆಚ್ಚುವರಿ ಶವಗಳು ಸಿಕ್ಕಂತೆ ಈ ಸಂಖ್ಯೆ ಏರಿಕೆಯಾಗಬಹುದು ಎಂದು ಹೇಳಿದ್ದಾರೆ. ಇನ್ನೂ ಸಮುದ್ರದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾ ಮುಂದುವರೆದಿದೆ.

# ವೋಟ್ ಚೋರಿ ಹೈಡ್ರಾಮಾ:ಭೇಟಿ ಸಾಧ್ಯವಿಲ್ಲ, ಏನಿದ್ದರೂ ಕೋರ್ಟ್ ಮೂಲಕವೇ ಬನ್ನಿ; ರಾಹುಲ್ ಗಾಂಧಿ–ಖರ್ಗೆ ಭೇಟಿ ಮನವಿ ತಿರಸ್ಕರಿಸಿದ ಸಿಜೆಐ

**ನವದೆಹಲಿ:** ದೇಶದಲ್ಲಿ ತೀವ್ರ ರಾಜಕೀಯ ಸಂಚಲನ ಮೂಡಿಸಿರುವ




'ವೋಟ್ ಚೋರಿ' (ಮತ ಕಳ್ಳತನ) ಮತ್ತು ಚುನಾವಣಾ ಅಕ್ರಮಗಳ ಆರೋಪಗಳಿಗೆ ಸಂಬಂಧಿಸಿದಂತೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿ ಮನವಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ನಿರಾಕರಿಸಿದ್ದಾರೆ.

ಈ ಇಡೀ ಪ್ರಕರಣವು ಸದ್ಯ ಸುಪ್ರೀಂ ಕೋರ್ಟ್‌ನ ನ್ಯಾಯಾಂಗದ ಪರಿಶೀಲನೆಯಲ್ಲಿ ಇರುವುದರಿಂದ ಆಡಳಿತಾತ್ಮಕವಾಗಿ ಭೇಟಿ ಮಾಡಲು ಸಾಧ್ಯವಿಲ್ಲ ಎಂದು ಸಿಜೆಐ ಸ್ಪಷ್ಟಪಡಿಸಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಸಂಜೆ 4ರಿಂದ 5 ಗಂಟೆಯ ನಡುವೆ ಸಿಜೆಐ ಅವರನ್ನು ಭೇಟಿ ಮಾಡಲು ಸಮಯ ಕೋರಿದ್ದರು.

ಚುನಾವಣಾ ಅಕ್ರಮಗಳು ನಡೆದಿವೆ ಎಂಬ ಆರೋಪದ ಕುರಿತು ಮನವಿ ಸಲ್ಲಿಸುವುದು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸುವುದು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವುದು ಮತ್ತು ಮತಪತ್ರಗಳ ಬಳಕೆಯನ್ನು ಮರುಸ್ಥಾಪಿಸುವುದು ಅವರ ಬೇಡಿಕೆಗಳಾಗಿದ್ದವು.

ಭಾನುವಾರ ಇಮೇಲ್ ಮೂಲಕ ಕಾಂಗ್ರೆಸ್ ನಾಯಕರಿಗೆ ಪ್ರತಿಕ್ರಿಯಿಸಿರುವ ಸಿಜೆಐ, ಈ ವಿಷಯ ನ್ಯಾಯಾಲಯದ ವಿಚಾರಣೆಯಲ್ಲಿರುವುದರಿಂದ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ತಿಳಿಸಿದ್ದಾರೆ.

ಸ್ವತಃ ಸಿಜೆಐ ಸೂರ್ಯಕಾಂತ್ ಅವರೇ ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ನ್ಯಾಯಪೀಠದ ನೇತೃತ್ವ ವಹಿಸಿರುವುದನ್ನೂ ಉಲ್ಲೇಖಿಸಲಾಗಿದೆ. ಆಡಳಿತಾತ್ಮಕ ಹಂತದಲ್ಲಿ ಈ ವಿಚಾರವಾಗಿ ಯಾವುದೇ ಆದೇಶ ನೀಡಲು ಸಾಧ್ಯವಿಲ್ಲ ಎಂದು ಸಿಜೆಐ ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ನಾಯಕರು ನ್ಯಾಯಾಂಗ ವಿಭಾಗದಲ್ಲಿ ಅರ್ಜಿ ಸಲ್ಲಿಸಬಹುದು. ಆ ಅರ್ಜಿಯನ್ನು ಮಂಗಳವಾರ ವಿಚಾರಣೆಗೆ ಪರಿಗಣಿಸಬಹುದು ಎಂದು ಮೂಲಗಳು ತಿಳಿಸಿವೆ.

ನಾಗರಿಕರ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾದರೆ ಸುಪ್ರೀಂ ಕೋರ್ಟ್ ದಿನದ 24 ಗಂಟೆಯೂ, ವಾರದ ಏಳು ದಿನಗಳೂ ಅವರಿಗಾಗಿ ತೆರೆದಿರುತ್ತದೆ. ಆದರೆ, ಆಡಳಿತಾತ್ಮಕ ಹಂತದಲ್ಲಿ ಕಾರ್ಯಾಂಗದ ಕಾರ್ಯವೈಖರಿಯಲ್ಲಿ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದೂ ತಿಳಿಸಿದ್ದಾರೆ.

ವಿರೋಧ ಪಕ್ಷಗಳು ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ವರೆಗೆ ಮೆರವಣಿಗೆ ನಡೆಸಲು ಯೋಜಿಸಿರುವುದಕ್ಕೆ ಒಂದು ದಿನ ಮುನ್ನ ಈ ಬೆಳವಣಿಗೆ ನಡೆದಿದೆ.

ಕಾಂಗ್ರೆಸ್ ಈ ಪ್ರತಿಭಟನೆಗೆ ಚಲೋ ದೆಹಲಿ ಪ್ರಜಾಪ್ರಭುತ್ವಕ್ಕಾಗಿ ಮೆರವಣಿಗೆ ಎಂದು ಹೆಸರಿಟ್ಟಿದೆ. ಸೋಮವಾರ ಮಧ್ಯಾಹ್ನ 1.30ಕ್ಕೆ ಕನ್ನಾಟ್ ಪ್ಲೇಸ್ ಬರಾಖಂಬಾ ರಸ್ತೆ ಜಂಕ್ಷನ್‌ನಲ್ಲಿ ಸೇರಲು ಪ್ರತಿಭಟನಾಕಾರರಿಗೆ ಕರೆ ನೀಡಿದೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ಪಕ್ಷ, ಲಿಂಗ, ಜಾತಿ, ಸಮುದಾಯ ಮತ್ತು ರಾಜ್ಯಗಳ ಭೇದವಿಲ್ಲದೆ ದೇಶದ ಜನರು ಈ ಮೆರವಣಿಗೆಯಲ್ಲಿ ಒಂದಾಗಲಿದ್ದಾರೆ ಎಂದು ಹೇಳಿದ್ದಾರೆ.

ಶನಿವಾರದ ಪ್ರತಿಭಟನೆಯನ್ನು ಉಲ್ಲೇಖಿಸಿದ ಅವರು, ದೇಶದ ಯುವಜನರು ಶಾಂತಿಯುತವಾಗಿ ಪ್ರತಿಭಟಿಸಲು ದೆಹಲಿಯಲ್ಲಿ ಬೀದಿಗಿಳಿದಿದ್ದರು. ಅವರ ಹೃದಯದಲ್ಲಿ ಪ್ರೀತಿ ಇತ್ತೇ ಹೊರತು ದ್ವೇಷವಾಗಲಿ, ಕೋಪವಾಗಲಿ ಇರಲಿಲ್ಲ. ಆದರೆ, ಪೊಲೀಸರು ಮತ್ತು ಬಿಜೆಪಿ ಕಾರ್ಯಕರ್ತರು ಅವರ ಮೇಲೆ ಹಲ್ಲೆ ನಡೆಸಿದರು. ನಾವು ಬಯಸುವ ಭಾರತ ಇದಲ್ಲ ಎಂದು ಆರೋಪಿಸಿದ್ದಾರೆ.

# ಬೆಂಗಳೂರಿನಲ್ಲಿ ಸಂಚಾರ ದಟ್ಟಣೆಯಿಂದ ವರ್ಷಕ್ಕೆ 1,200 ಕೋಟಿ ರೂ. ನಷ್ಟದ ಎಚ್ಚರಿಕೆ




**ಬೆಂಗಳೂರು:** ಭಾರತದ ಪ್ರಮುಖ ಐಟಿ, ಜೈವಿಕ ತಂತ್ರಜ್ಞಾನ ಮತ್ತು ಉದ್ಯಮ ವಲಯದ ಕೇಂದ್ರವಾಗಿರುವ ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಸಂಚಾರ ದಟ್ಟಣೆ ಇದೀಗ ಕೇವಲ ಸಾರ್ವಜನಿಕರ ದೈನಂದಿನ ಸಮಸ್ಯೆಯಾಗಿ ಉಳಿದಿಲ್ಲ. ಅದು ನಗರದ ಆರ್ಥಿಕ ಬೆಳವಣಿಗೆ, ಉತ್ಪಾದಕತೆ ಮತ್ತು ಭವಿಷ್ಯದ ಅಭಿವೃದ್ಧಿಗೆ ಸವಾಲಾಗಿ ಪರಿಣಮಿಸಿದೆ. ಸಂಚಾರ ದಟ್ಟಣೆಯಿಂದಾಗಿ ಪ್ರತಿವರ್ಷ ಏಳು ಲಕ್ಷಕ್ಕೂ ಅಧಿಕ ಉತ್ಪಾದಕ ಗಂಟೆಗಳು ವ್ಯರ್ಥವಾಗುತ್ತಿದ್ದು, ಸುಮಾರು 1,200 ಕೋಟಿ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂಬ ಅಂದಾಜು ಆತಂಕ ಮೂಡಿಸಿದೆ.

2026ರ ಮೊಬಿಲಿಟಿ ಸಿಂಪೋಸಿಯಂನಲ್ಲಿ ಮಾತನಾಡಿದ ಬಯೋಕಾನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಮಜುಂದಾರ್–ಶಾ, ಬೆಂಗಳೂರಿನ ಸಂಚಾರ ದಟ್ಟಣೆಯನ್ನು ನಗರದ ಆರ್ಥಿಕ ಭವಿಷ್ಯದ ಕುರಿತು ಗಂಭೀರ ಎಚ್ಚರಿಕೆಯ ಸಂಕೇತ ಎಂದು ಎಚ್ಚರಿಸಿದ್ದಾರೆ. ದಟ್ಟಣೆಯಿಂದ ಉಂಟಾಗುವ ನಷ್ಟದ ಪ್ರಮಾಣ ಇನ್ನೂ ಹೆಚ್ಚಿರಬಹುದೆಂಬ ಆತಂಕವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಕಾರ್ಪೊರೇಟ್ ಪ್ರಯಾಣ ವ್ಯವಸ್ಥೆಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಮೂವ್‌ಇನ್‌ಸಿಂಕ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದ್ಯಮಿಗಳು, ಜನಪ್ರತಿನಿಧಿಗಳು, ನಗರ ಆಡಳಿತದ ಅಧಿಕಾರಿಗಳು, ನಾಗರಿಕ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಅಂತರರಾಷ್ಟ್ರೀಯ ತಜ್ಞರು ಭಾಗವಹಿಸಿ ಸಂಚಾರ ಸಮಸ್ಯೆಗೆ ಸಮಗ್ರ ಪರಿಹಾರ ಕಂಡುಕೊಳ್ಳುವ ಕುರಿತು ಚರ್ಚಿಸಿದ್ದಾರೆ.

ವಿಶೇಷವಾಗಿ ಹೊರ ವರ್ತುಲ ರಸ್ತೆ (ಔಟರ್ ರಿಂಗ್ ರೋಡ್), ಪ್ರಮುಖ ಐಟಿ ಕಾರಿಡಾರ್‌ಗಳು ಮತ್ತು ವಾಣಿಜ್ಯ ಪ್ರದೇಶಗಳಲ್ಲಿ ವಾಹನ ದಟ್ಟಣೆ ತೀವ್ರವಾಗಿರುವುದು ಉದ್ಯೋಗಿಗಳ ದೈನಂದಿನ ಪ್ರಯಾಣದ ಮೇಲೆ ಪರಿಣಾಮ ಬೀರುತ್ತಿದೆ. ಕಚೇರಿಗಳಿಗೆ ತೆರಳಲು ಮತ್ತು ಮನೆಗೆ ಮರಳಲು ಗಂಟೆಗಟ್ಟಲೆ ರಸ್ತೆಯಲ್ಲೇ ಕಳೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ ಉದ್ಯೋಗಿಗಳ ಸಮಯ, ಇಂಧನ ಮತ್ತು ಶ್ರಮ ವ್ಯರ್ಥವಾಗುವುದರ ಜತೆಗೆ ಕಂಪನಿಗಳ ಕಾರ್ಯಕ್ಷಮತೆ ಹಾಗೂ ನಗರದಲ್ಲಿ ಸರಕು ಮತ್ತು ಸೇವೆಗಳ ಚಲನವಲನಕ್ಕೂ ತೊಂದರೆಯಾಗುತ್ತಿದೆ. ಆಂಬುಲೆನ್ಸ್‌ಗಳು, ಅಗ್ನಿಶಾಮಕ ವಾಹನಗಳು ಸೇರಿದಂತೆ ತುರ್ತು ಸೇವೆಗಳ ಸಂಚಾರಕ್ಕೂ ದಟ್ಟಣೆ ಅಡ್ಡಿ ಉಯಾಗುತ್ತಿದೆ.

ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಹಲವು ವರ್ಷಗಳಿಂದ ರಸ್ತೆ ಅಭಿವೃದ್ಧಿ, ಮೇಲ್ಸೇತುವೆ, ಅಂಡರ್‌ಪಾಸ್, ಸಿಗ್ನಲ್‌ಗಳ ಸುಧಾರಣೆ ಮತ್ತು ಮೆಟ್ರೋ ರೈಲು ವಿಸ್ತರಣೆಯಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಮ ಮೆಟ್ರೋ ಸೇವೆಯ ವಿಸ್ತರಣೆಯು ಹಲವು ಪ್ರಯಾಣಿಕರಿಗೆ ಪರ್ಯಾಯ ಸಾರಿಗೆ ವ್ಯವಸ್ಥೆಯನ್ನು ಒದಗಿಸಿದ್ದರೂ, ನಗರಾದ್ಯಂತ ಸಂಚಾರದ ಒತ್ತಡವನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗಿಲ್ಲ. ನಗರದ ವಿವಿಧ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವ ಸಂದರ್ಭದಲ್ಲೈ ವಾಹನಗಳ ಸಂಖ್ಯೆ, ಜನಸಂಖ್ಯೆ ಮತ್ತು ಉದ್ಯೋಗ ಕೇಂದ್ರಗಳ ವಿಸ್ತರಣೆ ಸಾರಿಗೆ ವ್ಯವಸ್ಥೆಯ ಮೇಲೆ ನಿರಂತರ ಒತ್ತಡ ಹೇರುತ್ತಿವೆ. ಮತ್ತೊಂದೆಡೆ ಕಚೇರಿ ಸಮಯದಲ್ಲಿ ಒಂದೇ ಪ್ರದೇಶದತ್ತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಿಗಳು ಪ್ರಯಾಣಿಸುವುದರಿಂದ ಪ್ರಮುಖ ರಸ್ತೆಗಳಲ್ಲಿ ದಟ್ಟಣೆ ಹೆಚ್ಚುತ್ತಿದೆ.

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ರಸ್ತೆಗಳನ್ನು ವಿಸ್ತರಿಸುವುದು ಅಥವಾ ಹೊಸ ಮೇಲ್ಸೇತುವೆಗಳನ್ನು ನಿರ್ಮಿಸುವುದು ಮಾತ್ರ ದೀರ್ಘಕಾಲೀನ ಪರಿಹಾರವಾಗಲಾರದು. ಜನರು ಎಲ್ಲಿ ವಾಸಿಸುತ್ತಾರೆ? ಎಲ್ಲಿ ಕೆಲಸ ಮಾಡುತ್ತಾರೆ? ಸಾರ್ವಜನಿಕ ಸಾರಿಗೆಗೆ ಎಷ್ಟು ಸುಲಭವಾಗಿ ಸಂಪರ್ಕ ಹೊಂದುತ್ತಾರೆ ಮತ್ತು ನಗರದ ವಿವಿಧ ಭಾಗಗಳಲ್ಲಿ ಉದ್ಯೋಗಾವಕಾಶಗಳು ಹೇಗೆ ಹಂಚಿಕೆಯಾಗಿವೆ? ಎಂಬ ಅಂಶಗಳನ್ನೂ ಸಮಗ್ರವಾಗಿ ಪರಿಗಣಿಸಬೇಕಾಗಿದೆ. ನಗರದ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸುಮಾರು 3,000 ಬಸ್‌ಗಳನ್ನು ಸೇರ್ಪಡೆಗೊಳಿಸುವ ಗುರಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಪ್ರಸ್ತಾಪಿಸಿದ್ದಾರೆ. ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸುವುದರ ಜತೆಗೆ ಅವುಗಳ ಸಂಚಾರಕ್ಕೆ ಅನುಕೂಲವಾಗುವ ವ್ಯವಸ್ಥೆಯನ್ನೂ ರೂಪಿಸಬೇಕಿದೆ. ಬಸ್‌ಗಳು ಖಾಸಗಿ ವಾಹನಗಳಂತೆಯೇ ದಟ್ಟಣೆಯಲ್ಲಿ ಸಿಲುಕಿಕೊಂಡರೆ, ಅವುಗಳ ಸಂಖ್ಯೆಯ ಹೆಚ್ಚಳದಿಂದ ಮಾತ್ರ ಪ್ರಯಾಣದ ಸಮಯ ಕಡಿಮೆಯಾಗುವುದಿಲ್ಲ.

ಬೆಂಗಳೂರು ವಾಕ್ಸ್ ಸಂಸ್ಥಾಪಕ ಅರುಣ್ ಪೈ ಅವರು ಪಾದಚಾರಿ ಮಾರ್ಗಗಳ ಸಮಸ್ಯೆಗಳನ್ನು ಗುರುತಿಸಲು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸುವುದು, ಮರಗಳ ಸುತ್ತಲಿನ ಜಾಗವನ್ನು ಸಮರ್ಪಕವಾಗಿ ಬಳಸುವುದು ಹಾಗೂ ಹುಲ್ಲು–ಬ್ಲಾಕ್ ಪೇವರ್‌ಗಳಂತಹ ಪರ್ಯಾಯ ಮೇಲ್ಮೈಗಳನ್ನು ಪರಿಗಣಿಸುವುದನ್ನು ಪ್ರಸ್ತಾಪಿಸಿದ್ದಾರೆ. ಆದರೆ ಪಾದಚಾರಿ ಮಾರ್ಗಗಳ ಮೇಲೆ ವಾಹನಗಳ ನಿಲುಗಡೆ, ಅನಧಿಕೃತ ಅತಿಕ್ರಮಣ, ಹಾಳಾದ ಮೇಲ್ಮೈ ಮತ್ತು ಸುರಕ್ಷಿತ ರಸ್ತೆ ದಾಟುವ ವ್ಯವಸ್ಥೆಯ ಕೊರತೆಯಂತಹ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬೇಕಿದೆ.

ಬೆಂಗಳೂರಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಉಪಗ್ರಹ ನಗರಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾಪವೂ ಚರ್ಚೆಯಲ್ಲಿದೆ. ಆದರೆ ಉಪಗ್ರಹ ನಗರಗಳನ್ನು ಘೋಷಿಸುವುದಷ್ಟೇ ಸಾಕಾಗುವುದಿಲ್ಲ. ಅಲ್ಲಿ ಉದ್ಯೋಗಾವಕಾಶಗಳು, ವಸತಿ, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಸಾರಿಗೆ ಮತ್ತು ಅಗತ್ಯ ನಾಗರಿಕ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಬೇಕಿದೆ.

## ಹೇ ಮನಸೇ Relax please

# 'ನನ್ನೆಲ್ಲಾ ಜನ್ಮಗಳಿಗೂ ನೀನೇ ಸಖಿ..!'

ರಾತ್ರಿ ಎರಡು ಗಂಟೆಯಾಗಿರಬೇಕು. ಬೆಂಗಳೂರಿನ ಎಂ.ಜಿ. ರೋಡಿನ ಬೀದಿ ದೀಪಗಳು ಮಂಜಿನ ಮುಸುಕೊಳಗೆ ತೂಕಡಿಸುತ್ತಿದ್ದವು. ಕಿಟಕಿಯಾಚೆ ಇಡೀ ಜಗತ್ತು ಮಲಗಿರುವಾಗ, ಎದೆಯಾಳದಲ್ಲಿ ಒಂದು ಜ್ವಾಲಾಮುಖಿ ಎಚ್ಚರವಾಗಿರುತ್ತದಲ್ಲ... ದಟ್ ಈಸ್ ಕಾಲ್ಡ್ ಲವ್, ಮೈ ಡಿಯರ್ friends.

ಪ್ರೀತಿ ಅಂದರೆ ಕೇವಲ ಹಾರ್ಮೋನ್‌ಗಳ ಕಿತಾಪತಿಯಲ್ಲ. ಅದು ಎದೆಯ ಮೂಲೆಯಲ್ಲಿ ಕುಳಿತು ಇಡೀ ಆಯಸ್ಸನ್ನು ಕಿತ್ತು ತಿನ್ನುವ ಸಿಹಿ ಕಾಯಿಲೆ. Love is not just a feeling, it's an incurable madness. ಆ ಹುಚ್ಚು ನೆತ್ತಿಗೇರಿದಾಗ ಮಾತ್ರ ಮನುಷ್ಯನಿಗೆ ಬದುಕಿನ ನಿಜವಾದ ಗಂಧ ಸಿಗುವುದು. ಅಂತಹದ್ದೇ ಒಂದು ಗಂಧ, ಒಂದು ಧಗೆ, ಇಬ್ಬರು ಹುಚ್ಚು ಜೀವಗಳ ನಡುವೆ ಹರಡಿಕೊಂಡಿತ್ತು.

ಅವನ ಹೆಸರು ಕಬೀರ್ ಅಂತಲೋ, ಅವಳ ಹೆಸರು ಮಧುಮತಿ ಅಂತಲೋ ಕರೆಯಬೇಕಿಲ್ಲ. ಜಗತ್ತಿನ ಕಣ್ಣಿಗೆ ಅವರು ಯಾರೋ ಇಬ್ಬರು. ಆದರೆ ಒಬ್ಬರಿಗೊಬ್ಬರಿಗೆ? ಅವರಿಬ್ಬರದು ಕೇವಲ ಹೆಸರಷ್ಟೇ ಆಗಿರಲಿಲ್ಲ; ಎದೆಯ ಬಡಿತದ ಇನ್ನೊಂದು ಶಬ್ದವಾಗಿತ್ತು.

ಅವನೆಂದರೆ ಅವಳಿಗೆ ಬರೀ ಹುಡುಗನಲ್ಲ, ಎದೆಯಾಳಕ್ಕೆ ಇಳಿಯುವ ಉಸಿರು. ಉಸಿರಾಡೋದನ್ನು ಯಾರಾದರೂ ಮರೆಯೋಕೆ ಸಾಧ್ಯವಾ? ಮರೆತರೆ ಜೀವವೇ ಮುಗಿದುಹೋಗುತ್ತದೆ. ಅದೇ ರೀತಿ,



ಅವನು ಕ್ಷಣಕಾಲ ಕಾಣದಿದ್ದರೂ ಅವಳ ಗಂಟಲು ಒಣಗಿಹೋಗುತ್ತಿತ್ತು, ಕಣ್ಣುಗಳು ಅನಾಥವಾಗಿ ದಾರಿ ಕಾಯುತ್ತಿದ್ದವು. He was her oxygen, her silent prayer in the darkest hours. ಇತ್ತ ಅವನಿಗೆ? ಅವಳು ಕೇವಲ ಪ್ರೇಯಸಿಯಾಗಿರಲಿಲ್ಲ, ಅವನ ಪ್ರಾಣವೇ ಆಗಿದ್ದಳು. ಅವಳ ಕಣ್ಣಿನ ಒಂದು ಹನಿ ನೀರು ಅವನ ಎದೆಯ ಮೇಲೆ ಬಿದ್ದರೆ, ಇಡೀ ಜಗತ್ತನ್ನೇ ಸುಟ್ಟುಹಾಕುವಷ್ಟು ಕ್ರೋಧ, ಮರುಕ್ಷಣದಲ್ಲೇ ಅವಳ ಮುಖದ ನಗು ನೋಡಿದರೆ ಸರ್ವಸ್ವವನ್ನೂ ಧಾರೆ ಎರೆಯುವಷ್ಟು ತಲ್ಲಣ.

ಅವಳು ಅವನ ಕೈ ಹಿಡಿದು ನಡೆದಾಗ ಅವನು ಯಾವತ್ತೂ ನೆಲದ ಮೇಲೆ ಕಾಲಿಡುತ್ತಿರಲಿಲ್ಲ; ಗಾಳಿಯಲ್ಲಿ ತೇಲುತ್ತಿದ್ದ. When she looked into his eyes, the entire chaotic world used to pause for a second. ಅವಳ ಆ ಅಗಲವಾದ, ಆಳವಾದ ಕಣ್ಣುಗಳಲ್ಲಿ ನೂರಾರು ಸಂಜೆಗಳ ಕೆಂಪಿನ ಛಾಯೆ ಇರುತ್ತಿತ್ತು. ಆ ಕಣ್ಣುಗಳ ಮುಂದೆ ಜಗತ್ತಿನ ಯಾವ ತತ್ವಜ್ಞಾನವೂ ನಿಲ್ಲುತ್ತಿರಲಿಲ್ಲ. ಅವನಿಗೆ ಚೆನ್ನಾಗಿ ಗೊತ್ತಿತ್ತು? ಈ ಹೆಣ್ಣು ತನ್ನ ಕೈಬಿಟ್ಟರೆ ತಾನು ಬದುಕಿರಲಾರೆ. ಬದುಕಿದ್ದರೂ ಅದು ಶವದ ಅಲೆದಾಟವಷ್ಟೇ.

ಅದೊಂದು ಕಡು ಮಳೆಯ ಸಂಜೆ. ಮಳೆ ಎಂದರೆ ಪ್ರೇಮಿಗಳ ಪಾಲಿಗೆ ದೇವತೆಗಳು ಸುರಿಸುವ ಸುಗಂಧ. ಅವರಿಬ್ಬರೂ ಆ ಹಳೆಯ ಕೆಫೆಯ ಮೂಲೆಯಲ್ಲಿ ಮುಖಾಮುಖಿ ಕುಳಿತಿದ್ದರು. ಹೊರಗಡೆ ಜಟಿಲವಾದ ಮಳೆ ಜಡಿಯುತ್ತಿತ್ತು, ಗಾಜಿನ ಕಿಟಕಿಯ ಮೇಲೆ ಹನಿಗಳು ಇಳಿದು ಕರಗುತ್ತಿದ್ದವು. ಟೇಬಲ್ ಮೇಲಿದ್ದ ಕಾಫಿ ಆವಿ ಕಳೆದುಕೊಂಡು ತಣ್ಣಗಾಗುತ್ತಿತ್ತು. ಆದರೆ ಅವರಿಬ್ಬರ ಕಣ್ಣುಗಳ ನಡುವಿನ ಉಷ್ಣತೆ ಮಾತ್ರ ಇಡೀ ಕೋಣೆಯನ್ನು ಆವರಿಸಿತ್ತು.

ಅವನು ಅವಳ ಕೋಮಲವಾದ ಬೆರಳುಗಳನ್ನು ತನ್ನ ಗಟ್ಟಿಮುಟ್ಟಾದ ಅಂಗೈಯಲ್ಲಿ ತೆಗೆದುಕೊಂಡ. ಅವಳ ನಡುಗುವ ಬೆರಳುಗಳ ಸ್ಪರ್ಶ ಅವನ ರಕ್ತನಾಳಗಳಲ್ಲೆಲ್ಲಾ ಮಿಂಚು ಹರಿಸಿತು. ಅವನ ಕಣ್ಣುಗಳಲ್ಲಿ ಪ್ರೀತಿಯ ಹಸಿವಿರಲಿಲ್ಲ, ಅಸಹಾಯಕವಾದ ಭಕ್ತಿಯಿತ್ತು.

ಅವಳ ಕಣ್ಣ ರೆಪ್ಪೆಗಳನ್ನು ನೇರವಾಗಿ ನೋಡುತ್ತಾ, ಗಂಟಲೊಡೆದ ದನಿಯಲ್ಲಿ ಅವನು ಕೇಳಿದ:

"ಕೇಳೇ ಹುಡುಗಿ... ಈ ಜನ್ಮ ನನಗೆ ತುಂಬಾ ಚಿಕ್ಕದನಿಸುತ್ತಿದೆ. ಅರವತ್ತೋ, ಎಪ್ಪತ್ತೋ ವರ್ಷ ನಿನ್ನ ಜೊತೆ ಬದುಕಿದರೆ ನನ್ನ ಎದೆಯ ದಾಹ ತೀರಲ್ಲ. ಈ ಒಂದೇ ಜನ್ಮದ ಆಯುಷ್ಯ ನಮ್ಮ ಪ್ರೀತಿಗೆ ಸಾಲದು. One lifetime is too damn short to love you. ಮುಂದಿನ ಎಲ್ಲಾ ಜನ್ಮಗಳಲ್ಲೂ ನೀನೇ ನನಗೆ ಸಖಿಯಾಗಿ ಸಿಗಬೇಕು. ಸಾವಿರ ಜನ್ಮ ಎತ್ತಿದರೂ, ಪ್ರತಿ ಜನ್ಮದಲ್ಲೂ ನನ್ನ ಕಣ್ಣುಗಳು ಹುಡುಕುವ ಏಕೈಕ ಬೆಳಕು ನೀನೇ ಆಗಿರಬೇಕು... ಸಿಗ್ತಿಯಾ ನೀನು?"

ಆ ಮಾತು ಗಾಳಿಯಲ್ಲಿ ಲೀನವಾಗುತ್ತಿದ್ದಂತೆ, ಅವಳ ಕಣ್ಣಿನ ಕೊನೆಯಿಂದ ಒಂದು ಹನಿ ಕಣ್ಣೀರು ಕೆನ್ನೆಯ ಇಳಿಜಾರಿನಲ್ಲಿ ಜಾರಿತು. ಅದು ನೋವಿನ ಹನಿಯಲ್ಲ; ಪ್ರೀತಿಯ ತೀವ್ರತೆ ತಾಳಲಾರದೆ ಎದೆ ಒಡೆದು ಹೊರಬಂದ ಪವಿತ್ರ ಗಂಗಾಜಲ. Some tears don't need words; they just carry the weight of an entire soul.

ಅವಳು ಆ ಕ್ಷಣವೇ ಅವನ ಕೈಯನ್ನು ಇನ್ನಷ್ಟು ಬಿಗಿಯಾಗಿ ಅಪ್ಪಿಕೊಂಡಳು. ತನ್ನ ಇನ್ನೊಂದು ಕೈಯಿಂದ ಅವನ ಎದೆಯ ಬಡಿತವನ್ನು ಮುಟ್ಟಿ, ತುಟಿ ಕಚ್ಚಿ ನಡುಗುವ ಧ್ವನಿಯಲ್ಲಿ ಹೇಳಿದಳು:

"ಹುಚ್ಚಾ... ನೀನು ಕೇಳಬೇಕಾ ಇದನ್ನ? ನೀನಿಲ್ಲದ ಸ್ವರ್ಗವೂ ನನಗೆ ನರಕವೇ. ಈ ಕ್ಷಣದಿಂದಲೇ ನಾನು ನನ್ನ ಆತ್ಮವನ್ನ ನಿನಗೆ ಬರೆದುಕೊಟ್ಟಿದ್ದೇನೆ. ಈ ಜನ್ಮ ಮಾತ್ರವಲ್ಲ, ನನ್ನೆಲ್ಲಾ ಮರುಜನ್ಮಗಳಿಗೂ ನೀನೇ ನನ್ನ ಸಖ, ನೀನೇ ನನ್ನ ನಾಯಕ. ನೀನು ಎಲ್ಲೇ ಹುಟ್ಟಿದರೂ, ಯಾವ ರೂಪದಲ್ಲೇ ಬಂದರೂ, ನಿನ್ನ ಕಣ್ಣಿನ ಈ ನೋಟವನ್ನು ಗುರುತುಹಿಡಿದು ನಿನ್ನ ಎದೆಗೆ ಬಂದು ಬೀಳುವ ಹಕ್ಕು ನನಗೊಂದಕ್ಕೇ ಇರಬೇಕು. You are my only destiny, across all universes, through every single rebirth."

ಆ ಕ್ಷಣದಲ್ಲಿ, ಆ ಕೆಫೆಯ ಕತ್ತಲ ಮೂಲೆಯಲ್ಲಿ ಇಬ್ಬರು ಮನುಷ್ಯರ ನಡುವೆ ಮೌನವೊಂದು ಘನೀಭವಿಸಿತು. ಇಬ್ಬರ ಉಸಿರು ಒಂದರಲ್ಲೊಂದು ಬೆರೆತುಹೋಗಿತ್ತು. ಅದೆಂಥಾ ಪ್ರೇಮವದು? ಸಾವಿಗೂ ಮುಟ್ಟಲಾಗದ, ಕಾಲದ ಗೆರೆಗಳನ್ನು ಅಳಿಸಿಹಾಕುವ ಅಮರವಾದ ಸೆಳೆತ. ಕಾಲ, ದೇಶ, ವಯಸ್ಸು ಎಲ್ಲವೂ ಕರಗಿ ನೀರಾಗಿ ಕೇವಲ ಎರಡು ಆತ್ಮಗಳು ಒಂದಾಗಿ ನಿಂತಿದ್ದವು.

ಇವತ್ತಿನ ದಿನಗಳಲ್ಲಿ ಪ್ರೀತಿ ಅಂದರೆ ಕೇವಲ ವಾಟ್ಸಪ್ ಮೆಸೇಜುಗಳು, ವೀಕೆಂಡ್ ಹ್ಯಾಂಗೌಟ್‌ಗಳು, ಮುರಿದುಹೋಗುವ ಕಮಿಟ್‌ಮೆಂಟ್‌ಗಳು ಅಂತ ತಿಳ್ಕೊಂಡ ಜನರಿಗೆ ಇವರ ಕಥೆ ಅರ್ಥವಾಗುವುದಿಲ್ಲ. ಐಠಠಜಖ ಚಿ ಜಜಜಠಿ, agonizing surrender. ಪ್ರೀತಿಯೆಂದರೆ ಇನ್ನೊಬ್ಬರ ಅಸ್ತಿತ್ವದೊಳಗೆ ತನ್ನ ಸ್ವಾರ್ಥವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದು.

ನೀವು ನಿಜವಾಗಿಯೂ ಪ್ರೀತಿಸಿದ್ದರೆ, ಒಮ್ಮೆಯಾದರೂ ಆ ಜೀವದ ಎದುರು ಕುಳಿತು, ಕೈ ಹಿಡಿದು ಹೇಳಿ ನೋಡಿ?"ನನ್ನ ಸಾವಿನಾಚೆಗೂ, ನನ್ನೆಲ್ಲಾ ಜನ್ಮಗಳಿಗೂ ನೀನೇ ಸಖಿ..." ಅಂತ. ಆ ಮಾತಿನ ತೂಕವನ್ನು ತಡೆಯುವ ಶಕ್ತಿ ಕೇವಲ ಹರೆಯದ, ಪರಿಶುದ್ಧವಾದ ಹೃದಯಕ್ಕೆ ಮಾತ್ರ ಇರುತ್ತದೆ. ಇಂತಹ ಒಂದು ಪ್ರೀತಿ ದಕ್ಕಿಸಿಕೊಳ್ಳುವುದು ಪ್ರತಿಯೊಬ್ಬನ ಜನ್ಮದ ತಪಸ್ಸು. ಯಾರಿಗೆ ಇದು ದಕ್ಕಿದೆಯೋ, ಅವರೇ ಈ ಭೂಮಿಯ ಮೇಲಿನ ನಿಜವಾದ ಚಕ್ರವರ್ತಿಗಳು.




■ ಡಾ.ನಂದುಪೂಜಾರಿ
ಸಿದ್ದಾಪುರ
ಪತ್ರಕರ್ತರು.
ಅಂಕಣಕಾರರು

## ಮೈಸೂರು ದಸರಾದಲ್ಲಿ ಹಗರಿಬೊಮ್ಮನಹಳ್ಳಿ ಉಪನ್ಯಾಸಕಿ ಸುಧಾ ಕೃತಿ ಲೋಕಾರ್ಪಣೆ

**ಹೊಸಪೇಟೆ ಧ್ವನಿ ನ್ಯೂಸ್ :**



**ಹಗರಿಬೊಮ್ಮನಹಳ್ಳಿ,** : ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿರುವ ವಿವಿಧ ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಪಟ್ಟಣದ ಉಪನ್ಯಾಸಕಿ ಸುಧಾ ಚಿದಾನಂದಗೌಡ ರಚಿಸಿರುವ "ಬದುಕು ಪ್ರಿಯವಾಗುವ ಬಗೆ" ಕಥಾ ಸಂಕಲನ ಬಿಡುಗಡೆಯಾಗಲಿದೆ.

ಕಾರ್ಯಕ್ರಮವು ದಿ.15 ರಂದು ಬೆಳಿಗ್ಗೆ 11.30ಕ್ಕೆ ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಲೇಖಕಿ ಸುಧಾ ಚಿದಾನಂದಗೌಡ, ರತ್ನಾ ಗದಗ ಹಾಗೂ ಸಂತೋಷ್ ಬಿ.ಟಿ ಭಾಗವಹಿಸಲಿದ್ದಾರೆ.

## ಅ.15ರಂದು ಏಡ್ಸ್ ಜಾಗೃತಿಗಾಗಿ ರೆಡ್ ರನ್ (ಮ್ಯಾರಥಾನ್) ಸ್ಪರ್ಧೆ

**ವಿಜಯನಗರ (ಹೊಸಪೇಟೆ) :** ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದಿಂದ 17 ರಿಂದ 25 ವರ್ಷದ ಕಾಲೇಜು ವಿದ್ಯಾರ್ಥಿಗಳಿಗಾಗಿ ಹೆಚ್.ಐ.ವಿ ಅಥವಾ ಏಡ್ಸ್ ಕುರಿತು ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವಿಕೆ ಹಾಗೂ ಏಡ್ಸ್ ಕಾಯ್ದೆ –2017ರ ಬಗ್ಗೆ ಜಾಗೃತಿ ಮೂಡಿಸಲು ನಗರದ ವಿಜಯನಗರ ಕಾಲೇಜು ಆವರಣದಿಂದ ಬೆಳಗ್ಗೆ 6.30ಕ್ಕೆ 5 ಕಿ.ಮೀ ರೆಡ್ ರನ್ (ಮ್ಯಾರಥಾನ್) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ವಿಭಾಗೀಯ ಮಟ್ಟದ ಚಿತ್ರಕಲಾ ಸ್ಪರ್ಧೆ: ಯಮನೂರಪ್ಪಗೆ ತೃತೀಯ ಬಹುಮಾನ

**ವಿಜಯನಗರ (ಹೊಸಪೇಟೆ) :** ಅ.13: ರಾಯಚೂರು ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಕಲ್ಯಾಣ ಕರ್ನಾಟಕ ವಿಭಾಗೀಯ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೀರಿದ್ದರೆ ನಾಳೆ ಎಂಬ ಘೋಷವಾಕ್ಯದಡಿಯಲ್ಲಿ ನಮ್ಮ ಭೂಮಿ ನಮ್ಮ ನೀರು ನಮ್ಮ ಶಕ್ತಿ ಎಂಬ ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಹೊಸಪೇಟೆಯ ಸರ್ಕಾರಿ ಪ್ರೌಢಶಾಲೆ ಅನಂತಶಯನಗುಡಿಯ ವಿದ್ಯಾರ್ಥಿ ಯಮನೂರಪ್ಪ ಅವರು ತೃತೀಯ ಬಹುಮಾನದೊಂದಿಗೆ ರೂ.10,000 ನಗದು ಬಹುಮಾನ ಪಡೆದುಕೊಂಡಿದ್ದಾರೆ. ಅಲ್ಲದೆ, ಹೊಸಪೇಟೆಯ ಕೆ.ಸಿ.ಎ. (ಏಅಂ) ಶಾಲೆಯ ವಿದ್ಯಾರ್ಥಿ ಗೌತಮ್ ಕೆ. ಚಿತ್ರಗಾರ ಹಾಗೂ ಸರ್ಕಾರಿ ಪ್ರೌಢಶಾಲೆ ನೆಹರೂ ಕಾಲೋನಿಯ ವಿದ್ಯಾರ್ಥಿನಿ ಸಭಾ ಅಲಿಯಾ ಇಬ್ಬರಿಗೂ ಸಮಾಧಾನಕರ ಬಹುಮಾನವಾಗಿ ತಲಾ ರೂ.5,000 ನಗದು ಪ್ರಶಸ್ತಿ ಲಭಿಸಿದೆ. ಸಾಧನೆಗೈದ ಮೂವರೂ ವಿದ್ಯಾರ್ಥಿಗಳನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ ಹಾಗೂ ಬಳ್ಳಾರಿಯ ಜಿಲ್ಲಾ ಅಂತರ್ಜಲ ಅಭಿವೃದ್ಧಿ ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಸಂತ್ ಅವರು ಅಭಿನಂದಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿವರ್ಗದವರು ವಿದ್ಯಾರ್ಥಿಗಳ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

### ಛಾಯಾಗ್ರಾಹಕರ ದಸರಾ ಕ್ರಿಕೆಟ್ ಪಂದ್ಯಾವಳಿಗೆ ಶ್ರೀನಿವಾಸ್ ಮೋತ್ಕರ್ ಚಾಲನೆ

## ಏಳು ತಂಡಗಳ ನಡುವೆ ಕ್ರಿಕೆಟ್ ಹಣಾಹಣಿ; ಕ್ರೀಡೆಯಿಂದ ಸ್ನೇಹ, ಒಗ್ಗಟ್ಟು ವೃದ್ಧಿ: ಮೋತ್ಕರ್



**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಬಳ್ಳಾರಿ ಜಿಲ್ಲಾ ಮತ್ತು ತಾಲೂಕು ಛಾಯಾಗ್ರಾಹಕರ ವತಿಯಿಂದ ದಸರಾ ಹಬ್ಬದ ಪ್ರಯುಕ್ತ ಆಯೋಜಿಸಿರುವ ಮೂರು ದಿನಗಳ ದಸರಾ ಕ್ರಿಕೆಟ್ ಪಂದ್ಯಾವಳಿಗೆ ಬಳ್ಳಾರಿ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್ ಚಾಲನೆ ನೀಡಿ, ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಆಟಗಾರರಿಗೆ ಶುಭ ಹಾರೈಸಿದರು.

ಅಕ್ಟೋಬರ್ 12, 14 ಮತ್ತು 15ರಂದು ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಒಟ್ಟು ಏಳು ತಂಡಗಳು ಭಾಗವಹಿಸುತ್ತಿವೆ. ಪ್ರತಿ ಪಂದ್ಯವನ್ನು 10 ಓವರ್‌ಗಳಿಗೆ ಸೀಮಿತಗೊಳಿಸಲಾಗಿದ್ದು, ದಿನಕ್ಕೆ ನಾಲ್ಕು ಪಂದ್ಯಗಳನ್ನು ನಡೆಸಲು ಆಯೋಜಕರು ಯೋಜಿಸಿದ್ದಾರೆ.

ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಶ್ರೀನಿವಾಸ್ ಮೋತ್ಕರ್, ಛಾಯಾಗ್ರಾಹಕರು ತಮ್ಮ ವೃತ್ತಿಯ ಮೂಲಕ ಸಮಾಜದ ವಿವಿಧ ಸ್ಮರಣೀಯ ಕ್ಷಣಗಳನ್ನು ಸೆರೆಹಿಡಿಯುವ ಮಹತ್ವದ ಕಾರ್ಯ ಮಾಡುತ್ತಿದ್ದಾರೆ. ವೃತ್ತಿಯ ಒತ್ತಡದ ನಡುವೆಯೂ ಇಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಕ್ರೀಡೆಯು ದೈಹಿಕ ಮತ್ತು ಮಾನಸಿಕ ಉಲ್ಲಾಸ ನೀಡುವುದರ ಜೊತೆಗೆ ಪರಸ್ಪರ ಸ್ನೇಹ, ಪ್ರೀತಿ ಹಾಗೂ ಸಹಕಾರದ ಮನೋಭಾವವನ್ನು ಬೆಳೆಸುತ್ತದೆ. ಛಾಯಾಗ್ರಾಹಕರು ವೃತ್ತಿಗೆ ಸೀಮಿತವಾಗದೆ, ಕ್ರೀಡಾ ಚಟುವಟಿಕೆಗಳ ಮೂಲಕ ಸಂಘಟಿತರಾಗಿ ಒಗ್ಗಟ್ಟು ಪ್ರದರ್ಶಿಸುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ದಸರಾ ಹಬ್ಬದ ಪ್ರಯುಕ್ತ ಆಯೋಜಿಸಿರುವ ಈ ಪಂದ್ಯಾವಳಿ ಎಲ್ಲರಲ್ಲೂ ಹೊಸ ಉತ್ಸಾಹ ಮೂಡಿಸಲಿ. ಏಳು ತಂಡಗಳ ಆಟಗಾರರು ಕ್ರೀಡಾಸ್ಫೂರ್ತಿಯಿಂದ ಆಟವಾಡಿ, ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮೂಲಕ ಕ್ರೀಡಾ ಮನೋಭಾವವನ್ನು ಎತ್ತಿಹಿಡಿಯಬೇಕು ಎಂದು ಹಾರೈಸಿದರು. ಅಲ್ಲದೆ, ಪಂದ್ಯಾವಳಿಯ ಆಯೋಜಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಛಾಯಾಗ್ರಾಹಕ ನಾಗಲ್ಲಿ ವೀರೇಶ್ ಅವರ ನೇತೃತ್ವದಲ್ಲಿ ಪಂದ್ಯಾವಳಿ ಆಯೋಜಿಸಲಾಗಿದ್ದು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಛಾಯಾಗ್ರಾಹಕರು ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

### ಕುರುಬರ ಸಂಘಕ್ಕೆ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕಾರ

## ಅಧ್ಯಕ್ಷರಾಗಿ ಕೆ.ಎಂ. ಮಹಾಲಿಂಗನಗೌಡ ಮುಂದುವರಿಕೆ



**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಜಿಲ್ಲಾ ಕುರುಬರ ಸಂಘದಲ್ಲಿ 3–3–2025ರ ಕಾರ್ಯಕಾರಿ ಸಮಿತಿಯ ನಡಾವಳಿಯಂತೆ, ಸಂಘಗಳ ನೋಂದಣಿ ಅಧಿಕಾರಿ ಹಾಗೂ ಸಹಕಾರ ಸಂಘಗಳ ಉಪನಿಬಂಧಕರು ಬಳ್ಳಾರಿ ಅವರ 2025ರ ಆದೇಶ ಮತ್ತು ಉಚ್ಚ ನ್ಯಾಯಾಲಯದ ಧಾರವಾಡ ಪೀಠವು 7–10–2026ರಂದು ನೀಡಿದ ಆದೇಶದಂತೆ ನೂತನ ಪದಾಧಿಕಾರಿಗಳು ಅಧಿಕಾರ ವಹಿಸಿಕೊಂಡರು.

ಪೂಜ್ಯ ಶ್ರೀ ಶರಣಯ್ಯ ಸ್ವಾಮಿ ಒಡೆಯರ್ ಹಾಗೂ ಸಂಘದ ನಿರ್ದೇಶಕರ ಸಮ್ಮುಖದಲ್ಲಿ ಸ್ವಯಂ ಪ್ರೇರಿತರಾಗಿ ಅಧಿಕಾರ/ಕಾರ್ಯಭಾರ ವಹಿಸಿಕೊಂಡು, ನಂತರ ಸಹಕಾರ ಸಂಘಗಳ ಉಪನಿಬಂಧಕರಿಗೆ ಅಧಿಕಾರ ವಹಿಸಿಕೊಂಡ ಬಗ್ಗೆ ಮಾಹಿತಿ ನೀಡಲಾಯಿತು.

ಕುರುಬರ ಸಂಘದ ಅಧ್ಯಕ್ಷರಾಗಿ ಕೆ.ಎಂ. ಮಹಾಲಿಂಗನಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎಸ್. ರಘು, ಖಜಾಂಚಿಯಾಗಿ ಟಿ.ಕೆ. ಕಾಮೇಶ, ಉಪಾಧ್ಯಕ್ಷರಾಗಿ ಕೆ. ನಾಗರಾಜ, ಸಹ ಕಾರ್ಯದರ್ಶಿಯಾಗಿ ಶ್ರೀಮತಿ ಕೆ.ಎಂ. ರಾಜೇಶ್ವರಿ, ಸಂಘಟನಾ ಕಾರ್ಯದರ್ಶಿಯಾಗಿ ಕೆ. ಪರಶುರಾಮ ಅವರು ಮುಂದುವರಿದಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕರಾದ ಕೆ. ಶಿವಕುಮಾರ್, ಕೆ.ಆರ್. ಸುರೇಂದ್ರ, ಜಾನೆಕುಂಟೆ ದೊಡ್ಡ ಬಸಪ್ಪ, ಗೊರವರ ಬಸವರಾಜ, ಶಾವೆಪಲ್ಲೆ ಬಸವರಾಜ, ಕರೂರು ಆದೆಪ್ಪ, ವಿತಲಾಪುರ ಉಮೇಶ್, ಸಿರುಗುಪ್ಪ ರೇವಣ್ಣ @ ದೇವು, ಬಂಡಿಹಟ್ಟಿ ಹೊನ್ನುರಸ್ವಾಮಿ, ದೇವಲಾಪುರ ದಿಂಡಿ ಮಹರ್ಷಿ ಇದ್ದರು.

## ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ: ಶಶೀಲ್ ಜಿ. ನಮೋಶಿ ಪರ ಅಮರನಾಥ ಪಾಟೀಲ ಪ್ರಚಾರ



**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಕರ್ನಾಟಕ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ವಿಧಾನಪರಿಷತ್ ಚುನಾವಣೆಯ ಹಿನ್ನೆಲೆಯಲ್ಲಿ ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ಬಳ್ಳಾರಿ ವಿಭಾಗದ ಪ್ರಭಾರಿಗಳಾದ ಅಮರನಾಥ ಪಾಟೀಲ ಮಹಾಗಾಂವ ಅವರು ಮಂಗಳವಾರ ಬಳ್ಳಾರಿ ನಗರದ ಸರಳಾದೇವಿ ಕಾಲೇಜಿಗೆ ಭೇಟಿ ನೀಡಿ, ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರ ಪರವಾಗಿ ಮತಯಾಚಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರನ್ನು ಭೇಟಿಯಾಗಿ ಅಭ್ಯರ್ಥಿಯ ಪರವಾಗಿ ಪ್ರಚಾರ ನಡೆಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ರಾಮಾಂಜಿನಿ ಕೆ., ಅಲ್ಪಸಂಖ್ಯಾತರ ಜಿಲ್ಲಾ ಮೋರ್ಚಾದ ಪದಾಧಿಕಾರಿಗಳು, ಒಬಿಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಜಾನ್, ಮಲ್ಲೇಶ್, ಕಾಲೇಜಿನ ಪ್ರಾಧ್ಯಾಪಕರು ಹಾಗೂ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

## ಸಮಾಜಮುಖಿ ಕಾರ್ಯಗಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಡುಗೆ ಅನನ್ಯ: ಎನ್.ಟಿ.ತಮ್ಮಣ್ಣ



**ಹೊಸಪೇಟೆ ಧ್ವನಿ ನ್ಯೂಸ್ :**

**ಕೂಡ್ಲಿಗಿ :** ಸಮಾಜದ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೈಗೊಳ್ಳುತ್ತಿರುವ ಸಮಾಜಮುಖಿ ಕಾರ್ಯಗಳು ಶ್ಲಾಘನೀಯ ಎಂದು ಸಮಾಜ ಸೇವಕ ಎನ್.ಟಿ.ತಮ್ಮಣ್ಣ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹಾರಕಬಾವಿ ಗ್ರಾಮದ ಚೌಡೇಶ್ವರಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಟ್ಟೂರು ಕಾರ್ಯಕ್ಷೇತ್ರದ ನಿಂಬಳಗೇರಿ ವಲಯದಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯೋಜನೆಯ ವಿವಿಧ ಜನಪರ ಕಾರ್ಯಕ್ರಮಗಳನ್ನು ಸ್ಮರಿಸಿದ ಅವರು, ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಯೋಜನೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಸಮಾಜಮುಖಿ ಸೇವಾಕಾರ್ಯಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ಕೊಟ್ಟೂರಿನ ಶ್ರೀ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ, ತಾ.ಪಂ ಮಾಜಿ ಸದಸ್ಯ ಎಸ್.ಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ ಮಾಜಿ ಅಧ್ಯಕ್ಷ ಕೋಟಿಲಿಂಗನಗೌಡ, ಮಾಜಿ ಸದಸ್ಯ ಮಹಾಲಿಂಗಪ್ಪ, ಎಸ್.ಕೊಟ್ರೇಶ್, ಸಿದ್ದಲಿಂಗಪ್ಪ, ಕೋಟೇಶ್, ಜನಜಾಗೃತಿ ವೇದಿಕೆ ಸದಸ್ಯ ಎ.ಚನ್ನಬಸಪ್ಪ, ನಿಂಬಳಗೆರೆ ಗದ್ದೆ ರವಿಕುಮಾರ್, ರಾಜೇಂದ್ರಗೌಡ, ಕಲ್ಲೇಶಪ್ಪ, ಈಶ್ವರಗೌಡ ಕಾರ್ಯಕ್ರಮದಲ್ಲಿದ್ದರು.

## ಪಿಎಂ–ಆಶಾ ಯೋಜನೆಯ ಪಿಡಿಪಿಎಸ್‌ಗೆ ಜೋಳ, ರಾಗಿ, ಭತ್ತ ಸೇರಿದಂತೆ ಕೃಷಿ ಉತ್ಪನ್ನಗಳನ್ನು ಸೇರ್ಪಡೆಗೊಳಿಸಿ: ರಾಘವೇಂದ್ರ ರೆಡ್ಡಿ

**ಹೊಸಪೇಟೆ ಧ್ವನಿ ನ್ಯೂಸ್ :**

**ಬಳ್ಳಾರಿ :** ಪ್ರಧಾನ ಮಂತ್ರಿ ಅನ್ನದಾತ ಆದಾಯ ಸಂರಕ್ಷಣಾ ಅಭಿಯಾನ (ಪಿಎಂ ಆಶಾ) ಯೋಜನೆಯ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಜೋಳ, ರಾಗಿ, ಭತ್ತ ಸೇರಿದಂತೆ ವಿವಿಧ ಕೃಷಿ ಉತ್ಪನ್ನಗಳನ್ನು ಸೇರ್ಪಡೆಗೊಳಿಸುವಂತೆ ಪಿ. ರಾಘವೇಂದ್ರ ರೆಡ್ಡಿ ತಾಳೂರು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಮಂಗಳವಾರ ಬಳ್ಳಾರಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದ ಅವರು, ರೈತರು ಬೆಳೆದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಬೆಲೆ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್ಪಿ) ಕಡಿಮೆಯಾದಾಗ, ಬೆಲೆ ಕೊರತೆಯಿಂದ ರೈತರಿಗೆ ಉಂಟಾಗುವ ನಷ್ಟವನ್ನು ಸರಿದೂಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತ ಕ್ರಮ ಕೈಗೊಳ್ಳಬೇಕು



ಎಂದು ಆಗ್ರಹಿಸಿದರು.

ರೈತರು ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರಗಳ ಜವಾಬ್ದಾರಿಯಾಗಿದೆ. ಇದರಿಂದ ರೈತರ ಆರ್ಥಿಕ ಭದ್ರತೆ ಹೆಚ್ಚುವುದರ ಜೊತೆಗೆ ಕೃಷಿ ಉತ್ಪಾದನೆಗೂ ಉತ್ತೇಜನ ದೊರೆಯಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಹಿಂದಿನ ಹಲವು ವರ್ಷಗಳಿಂದ ಹಾಗೂ 2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜೋಳ, ರಾಗಿ, ಭತ್ತ ಸೇರಿದಂತೆ ವಿವಿಧ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದೆ.

ಆದರೆ, ರಾಜ್ಯ ಸರ್ಕಾರ ಖರೀದಿ ಪ್ರಕ್ರಿಯೆಯನ್ನು ತಡವಾಗಿ ಆರಂಭಿಸುವುದು, ಖರೀದಿಸಿದ ಧಾನ್ಯಗಳನ್ನು ಗೋಣಿಚೀಲಗಳಲ್ಲಿ ತುಂಬಿಸುವಲ್ಲಿ ವಿಳಂಬ, ಸಾಗಣೆ ವ್ಯವಸ್ಥೆಯಲ್ಲಿನ ಅಸಮರ್ಪಕತೆ ಹಾಗೂ ರೈತರ ಖಾತೆಗಳಿಗೆ ಹಣವನ್ನು ತಕ್ಷಣ ಜಮೆ ಮಾಡದಿರುವುದು ಸೇರಿದಂತೆ ಹಲವು ಸಮಸ್ಯೆಗಳಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಅವರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಪ್ರಧಾನ ಮಂತ್ರಿ ಅನ್ನದಾತ ಆದಾಯ ಸಂರಕ್ಷಣಾ ಅಭಿಯಾನದ (ಪಿಎಂ ಆಶಾ) ಅಡಿಯಲ್ಲಿ ಪ್ರಸ್ತುತ ಬೆಲೆ ಕೊರತೆ ಪಾವತಿ ಯೋಜನೆಯನ್ನು (ಪಿಡಿಪಿಎಸ್) ಎಣ್ಣೆಬೀಜ ಬೆಳೆಗಳಿಗೆ ಮಾತ್ರ ಸೀಮಿತಗೊಳಿಸಿರುವುದನ್ನು ತಿದ್ದುಪಡಿ ಮಾಡಬೇಕು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ಜೋಳ, ರಾಗಿ, ಭತ್ತ ಸೇರಿದಂತೆ ಇತರ ಕೃಷಿ ಉತ್ಪನ್ನಗಳನ್ನೂ ಈ ಯೋಜನೆಯ ವ್ಯಾಪ್ತಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ.

Hosapete Dhwani Kannada Daily Editor, Printer, Publisher & Owned By K. Prakash Kakubalu, 120, 1ST Ward, Kakubal Post Hospet, Ballary, Dist : Vijayanagara Karnataka State,
Printed at Dwaraka Printers & Publishers, Plot No. 12, Opp. Govt. Girls Hostel, GaneshaNagara Koppal-583231 Koppal District, Karnataka State,
e-mail : hosapetedhwani32026@gmail.com, Cell : 9342568684